13 August 2026 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಪ್ರತಿ ವಿಷಯದಲ್ಲೂ ಕಲ್ಪನೆಯ ಭ್ರಮೆ ವಾಸ್ತವವನ್ನು ದೂರ ತಳ್ಳಿ, ಅವರ ಸುತ್ತ ಭ್ರಮಾಲೋಕವನ್ನೇ ಸೃಷ್ಟಿಸುತ್ತದೆ!

-ಸ್ನೇಹಾ ಆನಂದ್

info.varthaman@gmail.com


ಅಮೃತ ಸರೋವರಗಳಲ್ಲಿ ಮತ್ತೇ ತ್ರಿವರ್ಣ ಧ್ವಜ ಹಾರಾಟ — ಪುಟ ಸಂ. 2


ಬರ ಸಮಸ್ಯೆ: ಕುಡಿಯುವ ನೀರಿಗೆ ಸಮಸ್ಯೆಯಾಗದಿರಲಿ — ಪುಟ ಸಂ. 3


ಮತ್ತೇ ನೀರು ಬಿಡುವ ಆದೇಶ: ಮೈಸೂರಲ್ಲಿ ಮುಂದುವರೆದ ಹೋರಾಟ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 248 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಕೊನೆಗೂ ಸಚಿವರಿಗೆ ಸಿಕ್ತು ಖಾತೆ

## ಮುನಿಯಪ್ಪಗೆ ಸಮಾಜ ಕಲ್ಯಾಣ, ರಾಮಲಿಂಗಾರೆಡ್ಡಿ ಅರಣ್ಯಕ್ಕೆ ಬದಲು ಚಲುವರಾಯಸ್ವಾಮಿಗೆ ಜಲಸಂಪನ್ಮೂಲ, ನರೇಂದ್ರ ಸ್ವಾಮಿಗೆ ಕೃಷಿ ಖಾತೆ

**ಬೆಂಗಳೂರು:** ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಗ್ರೀನ್ ಸಿಗ್ನಲ್ ನೀಡಿದೆ. ಸಚಿವರ ಆಯ್ಕೆ ನಂತರ ಸುಮಾರು 10 ದಿನಗಳ ಬಳಿಕ ಖಾತೆ ಹಂಚಿಕೆ ಮಾಡಲಾಗಿದೆ. ಈ ಹಿಂದೆ ಕೆಲವು ಸಚಿವರಿಗೆ ನೀಡಲಾಗಿದ್ದ ಖಾತೆಗಳನ್ನು ಸಹ ಬದಲಿಸಲಾಗಿದೆ.

ಕೆ.ಎಚ್. ಮುನಿಯಪ್ಪ ಅವರ ಬೇಡಿಕೆಯಂತೆ ಆಹಾರ ಖಾತೆ ಬದಲಿಗೆ ಸಮಾಜ ಕಲ್ಯಾಣ ಖಾತೆ ನೀಡಲಾಗಿದೆ. ರಾಮಲಿಂಗಾರೆಡ್ಡಿ ಅವರಿಗೆ ಬೃಹತ್ ನೀರಾವರಿ ಬದಲು ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಖಾತೆ ಹಂಚಿಕೆ ಮಾಡಲಾಗಿದೆ. ಈ ಹಿಂದೆ ಈಶ್ವರ್ ಖಂಡ್ರೆ ಈ ಖಾತೆಗಳ ಸಚಿವರಾಗಿದ್ದರು.

ನೂತನ ಸಚಿವರ ಖಾತೆ ಹಂಚಿಕೆ ಮಾಡಿ ಪಟ್ಟಿಯನ್ನು ಹೈಕಮಾಂಡ್ ರಾಜ್ಯಕ್ಕೆ ಬುಧವಾರ ಕಳುಹಿಸಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವರ ಖಾತೆ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಟ್ಟರು. ಆನಂತರ ರಾಜ್ಯಪಾಲರು ಪಟ್ಟಿಗೆ ಅಧಿಕೃತವಾಗಿ ಸಹಿ ಹಾಕಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಬಳಿ ಹಣಕಾಸು ಸೇರಿದಂತೆ 10ಕ್ಕೂ ಹೆಚ್ಚು ಖಾತೆಗಳನ್ನು ಉಳಿಸಿಕೊಂಡಿದ್ದಾರೆ. ಸಂಪುಟ ವ್ಯವ ಹಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ, ಮಾಹಿತಿ, ಕಾನೂನು,



ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಮತ್ತು ಶಾಸನ, ಕೃಷಿ ಮಾರುಕಟ್ಟೆ, ಟೌನ್ ಮತ್ತು ಕಂಟ್ರಿ ಪ್ಲಾನಿಂಗ್, ಬಿಬಿಎಂಪಿ ವ್ಯಾಪ್ತಿಗೆ ಹೊರತಾದ ನಗರ ಸ್ಥಳೀಯ ಸಂಸ್ಥೆಗಳು, ಬಿಡಿಎ ಮತ್ತು ಬಿಎಂಆರ್‌ಡಿಎ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಹಂಚಿಕೆಯಾಗದ ಎಲ್ಲ ಖಾತೆಗಳು ಮುಖ್ಯಮಂತ್ರಿ ಬಳಿಯಲ್ಲಿವೆ.



### ಪೊನ್ನಣ್ಣ, ದೇಶಪಾಂಡೆಗೆ ಸ್ಥಾನ: ಮಂಕಾಳ ವೈದ್ಯ ಉಪಸಭಾಪತಿ

**ಬೆಂಗಳೂರು:** ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ನೇಮಕ ಮಾಡಲಾಗಿದೆ. ಹಳಿಯಾಳ ಕ್ಷೇತ್ರದ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಹಿಂದೆಯೂ ಅದೇ ಹುದ್ದೆಗಳನ್ನು ನಿರ್ವಹಿಸಿದ್ದ ಪೊನ್ನಣ್ಣ ಮತ್ತು ದೇಶಪಾಂಡೆ ಅವರನ್ನು ಮತ್ತೆ ಮುಂದುವರಿಸಲಾಗಿದೆ. ಇಬ್ಬರಿಗೂ ಪುಟ 2ಕ್ಕೆ

| ಸಚಿವರು | ಖಾತೆ |
|---|---|
| ಜಮೀರ್ ಅಹ್ಮದ್ ಖಾನ್ | ವಸತಿ |
| ರಾಮಲಿಂಗಾ ರೆಡ್ಡಿ | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ |
| ಲಕ್ಷ್ಮಣ ಸವದಿ | ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) |
| ರುದ್ರಪ್ಪ ಮಾನಪ್ಪ ಲಮಾಣಿ | ಸಕ್ಕರೆ ಮತ್ತು ಜವಳಿ |
| ಕೆ.ಎಚ್.ಮುನಿಯಪ್ಪ | ಸಮಾಜ ಕಲ್ಯಾಣ |
| ಶಿವರಾಜ್ ತಂಗಡಗಿ | ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ |
| ಯು.ಟಿ. ಖಾದರ್ | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್, ಆರೋಗ್ಯ, ಕುಟುಂಬ ಕಲ್ಯಾಣ |
| ಟಿ. ರಘುಮೂರ್ತಿ | ಪರಿಶಿಷ್ಟ ಪಂಗಡಗಳ ಕಲ್ಯಾಣ |
| ಡಾ. ಅಜಯ್ ಸಿಂಗ್ | ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ |
| ಚೆಲುವರಾಯಸ್ವಾಮಿ | ಬೃಹತ್ ಮತ್ತು ಮಧ್ಯಮ ನೀರಾವರಿ |
| ಮಧು ಬಂಗಾರಪ್ಪ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ |
| ಬಸವರಾಜ ರಾಯರಡ್ಡಿ | ಉನ್ನತ ಶಿಕ್ಷಣ |
| ಶಿವಲಿಂಗೇಗೌಡ | ಅಬಕಾರಿ |
| ಪುಟ್ಟರಂಗಶೆಟ್ಟಿ | ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ |
| ವಿಜಯಾನಂದ ಕಾಶಪ್ಪನವರ | ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ಉದ್ದಿಮೆಗಳು |
| ಸಂತೋಷ್ ಲಾಡ್ | ಕಾರ್ಮಿಕ ಮತ್ತು ಉದ್ಯೋಗ |
| ಕೆ.ಎಸ್. ಬಸವಂತಪ್ಪ | ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ |
| ಎಸ್.ಎಸ್. ಮಲ್ಲಿಕಾರ್ಜುನ | ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ |
| ರಿಜ್ವಾನ್ ಅರ್ಷದ್ | ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು |
| ನರೇಂದ್ರ ಸ್ವಾಮಿ | ಕೃಷಿ |
| ಎಚ್.ಸಿ. ಬಾಲಕೃಷ್ಣ | ಪೌರಾಡಳಿತ |
| ಬಿ. ನಾಗೇಂದ್ರ | ಯೋಜನೆ ಮತ್ತು ಸಾಂಖ್ಯಿಕ |

# ಸಿದ್ದರಾಮಯ್ಯ ನಡೆಗೆ ಧಿಕ್ಕಾರ!

## ಸಿದ್ದು ಕುರುಬ ಸಮುದಾಯದ ವಿರೋಧಿ: ಎಚ್.ವಿಶ್ವನಾಥ್ ವಾಗ್ದಾಳಿ

**ಮೈಸೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರುಬ ಸಮುದಾಯದ ವಿರೋಧಿ. ಗಾಯತ್ರಿ ಶಾಂತೇಗೌಡ ಅವರಿಗೆ ಸಚಿವ ಸ್ಥಾನ ತಪ್ಪಿಸಿದರು. ಹೀಗಾಗಿ, ಇಡೀ ಕುರುಬ ಸಮುದಾಯ ಅವರ ಬಗ್ಗೆ ಕುಪಿತಗೊಂಡಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮಪ್ಪ, ಮೈಸೂರನ್ನು ಮಹಾರಾಜರಿಗಿಂತಲೂ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ ಎಂದು ಹೇಳಿದ್ದ ಮಗನಿಗೆ ದೊಡ್ಡ ಜವಾಬ್ದಾರಿ ಸಿಗುವಂತೆ ನೋಡಿಕೊಂಡಿದ್ದಾರೆ. ಇಷ್ಟೊಂದು ದೊಡ್ಡ ಜಿಲ್ಲೆ ನಿಭಾಯಿಸಲು ಯತೀಂದ್ರಗೆ ಸಾಧ್ಯವಿಲ್ಲ. ಸಿದ್ದರಾಮಯ್ಯ ಪುತ್ರ ವ್ಯಾಮೋಹ ಬಿಡಬೇಕು. ಅವರ ನಡೆಗೆ ಧಿಕ್ಕಾರ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಅನಗತ್ಯ ಹಸ್ತಕ್ಷೇಪ ಮಾಡುತ್ತಿದ್ದಾರೆ. ಸಂಪುಟದಲ್ಲಿ ಮೈಸೂರಿಗೆ ಸೂಕ್ತ ಸ್ಥಾನಮಾನ ಸಿಕ್ಕಿಲ್ಲ. ಯಾವುದೇ ಅನುಭವ ಇಲ್ಲದ ಮಗನನ್ನು ಸಚಿವನನ್ನಾಗಿ ಮಾಡಿದ್ದಾರೆ.

ಸಿದ್ದರಾಮಯ್ಯ ದೇವರಾಜ ಅರಸು ಅವರ ಪಾದದ ದೂಳಿಗೂ ಸಮನಲ್ಲ. ಅವರು ಐದು ಕೆ.ಜಿ. ಅಕ್ಕಿ ಉಚಿತವಾಗಿ ಕೊಟ್ಟಿರಬಹುದು. ಆದರೆ, ಅರಸು ಉಳುವವನೇ ಭೂಮಿಯ ಒಡೆಯ ಎಂಬ ಕ್ರಾಂತಿಕಾರಿ ಆದೇಶ ಮಾಡಿದವರು. ಇನ್ನಾದರೂ ಅವರಿಗೆ ಹೋಲಿಸಿಕೊಳ್ಳುವುದನ್ನು



ನಿಲ್ಲಿಸಲಿ ಎಂದು ಟೀಕಿಸಿದರು.

ತಮಿಳುನಾಡಿಗೆ 15 ದಿನ ನಿತ್ಯ 12 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರ ನೀಡಿರುವ ಆದೇಶವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ವಿಶ್ವನಾಥ್ ಹೇಳಿದರು.

ಪ್ರಾಧಿಕಾರದ ಆದೇಶ ಸರಿಯಲ್ಲ. ನಮ್ಮ ರಾಜ್ಯದಲ್ಲಿ ಮಳೆಗಾಲ ಮುಗಿಯುವ ಹಂತಕ್ಕೆ ಬಂದಿದೆ. ಈ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದರು.

ಈ ವಿಚಾರದಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಸೌಹಾರ್ದಯುತವಾಗಿ ನಡೆದುಕೊಂಡಿದ್ದಾರೆ. ಹೀಗಿರುವಾಗ, ಕನ್ನಡ ಪರ ಸಂಘಟನೆಗಳು ಬಂದ್‌ಗೆ ಕರೆ ನೀಡಿರುವುದು ಸರಿಯಲ್ಲ. ಬಂದ್‌ಗೆ ಯಾರೂ ಬೆಂಬಲ ನೀಡಬಾರದು ಎಂದು ಕೋರಿದರು.

### ದಾಳಿ ಮಾಡಿಸಿದ್ದು ನಾನೇ: ಸಚಿವ ಪ್ರಿಯಾಂಕ್ ಖರ್ಗೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಕಾರಾಗೃಹದ ಮೇಲೆ ಸಿಸಿಬಿ ದಾಳಿ ಮಾಡಿಸಿದ್ದು ನಾನೇ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.



ಸಿಸಿಬಿ ದಾಳಿ ವೇಳೆ ಪ್ರಜ್ವಲ್ ರೇವಣ್ಣ ಬ್ಯಾರಕ್‌ನಲ್ಲಿ ಮೊಬೈಲ್ ಸಿಕ್ಕ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ರೇಡ್ ಆಗಬೇಕಾದರೆ ಗೃಹ ಇಲಾಖೆ ಅನುಮತಿ ಬೇಕು. ಎರಡು ವಾರದ ಹಿಂದೆ ನಾನು ಪರಪ್ಪನ

| ಜಲಾಶಯಗಳ ನೀರಿನ ಮಟ್ಟ | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 109.65ಅಡಿ |
| ಒಳಹರಿವು | 5446 ಕ್ಯುಸೆಕ್ |
| ಹೊರ ಹರಿವು | 2310 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2282.59 ಅಡಿ |
| ಒಳಹರಿವು | 8885 ಕ್ಯುಸೆಕ್ |
| ಹೊರ ಹರಿವು | 10000 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2858.15 ಅಡಿ |
| ಒಳಹರಿವು | 4060 ಕ್ಯುಸೆಕ್ |
| ಹೊರ ಹರಿವು | 5000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2915.70 |
| ಒಳಹರಿವು | 3216 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

# ಇಂದು ಕರ್ನಾಟಕ ಬಂದ್

## ವಾಟಾಳ್‌ಗೆ ಸಿಗದ ಕನ್ನಡಪರ ಸಂಘಟನೆಗಳ ಬೆಂಬಲ

**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ವಾಟಾಳ್ ನಾಗರಾಜ್ ಸೇರಿದಂತೆ ಕೆಲವು ಸಂಘಟನೆಗಳು ಕರೆ ನೀಡಿರುವ ಆಗಸ್ಟ್ 13ರ ಕರ್ನಾಟಕ ಬಂದ್ ಗೆ ಕನ್ನಡ ಪರ ಸಂಘಟನೆಗಳು ಬೆಂಬಲ ವಾಪಸ್ ಪಡೆದಿವೆ.

ಅಲ್ಲದೆ, ಹೋಟೆಲ್ ಮಾಲೀಕರ ಸಂಘ, ಆಟೋ, ಟ್ಯಾಕ್ಸಿ ಚಾಲಕರ ಸಂಘ, ಖಾಸಗಿ ಶಾಲೆಗಳು ಸೇರಿದಂತೆ ಪ್ರಮುಖ ಸಂಘಟನೆಗಳು ಬೆಂಬಲ ನೀಡಿಲ್ಲ. ಸರ್ಕಾರಿ ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗಿಲ್ಲ. ಬಹುತೇಕ ಬಂದ್ ನಡೆಯುವ ಲಕ್ಷಣ ಕಾಣುತ್ತಿಲ್ಲ.

**ಕರವೇ ಪ್ರವೀಣ್ ಶೆಟ್ಟಿ ಬಣ ಬೆಂಬಲವಿಲ್ಲ**

ತಮಿಳುನಾಡಿಗೆ ಕಾವೇರಿ ನೀರು ಹರಿಸಲು ಕಾವೇರಿ ನೀರು ನಿರ್ವಹಣಾ ಸಮಿತಿ ನೀಡಿರುವ ಆದೇಶ ಖಂಡಿಸಿ ಆಗಸ್ಟ್ 13ರಂದು ವಾಟಾಳ್ ನಾಗರಾಜ್ ಕರೆನೀಡಿರುವ ಕರ್ನಾಟಕ ಬಂದ್‌ಗೆ ಬೆಂಬಲ ನೀಡುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಬಂದ್ ಅನವಶ್ಯಕ ಎಂದು ಕರ್ನಾಟಕ



ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್ ಶೆಟ್ಟಿ ತಿಳಿಸಿದ್ದಾರೆ.

ಸಂಘಟನೆ ಕಾರ್ಯಕರ್ತರೊಂದಿಗೆ ಬುಧವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿರುವುದರಿಂದ ನೀರಿನ ಕೊರತೆ ಏರ್ಪಡುವ ಸಾಧ್ಯತೆ ಕಡಿಮೆ. ಹೀಗಾಗಿ ಬಂದ್‌ಗೆ ನಮ್ಮ ಬೆಂಬಲ ಇಲ್ಲ ಎಂದರು.

ನಾವು ಹಿಂದೆ ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದ ಸಂದರ್ಭದಲ್ಲಿ ರಾಜ್ಯದ ಜಲಾಶಯಗಳು ತುಂಬಿರಲಿಲ್ಲ. ಮಳೆ ಕೊರತೆಯಾಗಿತ್ತು. ಸದ್ಯ ಅಂಥ ಪರಿಸ್ಥಿತಿ ಇಲ್ಲ. ಬಂದ್ ಅಗತ್ಯವೂ ಇಲ್ಲ ಎಂದರು.

# ಕಾವೇರಿ: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ತೀರ್ಮಾನ

## ಮುಖ್ಯಮಂತ್ರಿ ಜೊತೆ ಚರ್ಚೆ: ಸಚಿವ ರಾಮಲಿಂಗಾರೆಡ್ಡಿ



**ಬೆಂಗಳೂರು:** ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡುವ ನಿರ್ದೇಶನ ಆಧರಿಸಿ ಮುಂದಿನ ತೀರ್ಮಾನವನ್ನು ಕರ್ನಾಟಕ ಕೈಗೊಳ್ಳಲಿದೆ ಎಂದು ಜಲಸಂಪನ್ಮೂಲ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕಮಾರ್ ಮತ್ತು ಹಿರಿಯ ಅಧಿಕಾರಗಳಿಗಳ ಜೊತೆಗೂ ಮಾತನಾಡಿದ್ದೇನೆ. ಮುಖ್ಯಮಂತ್ರಿ ಕೂಡ ವಕೀಲರ ಜೊತೆ



ಮಾತಾಡಿದ್ದು, ಮುಂದಿನ ಕಾನೂನು ಕ್ರಮಗಳ ಕುರಿತು ಚರ್ಚೆಗಳು ನಡೆದಿವೆ ಎಂದು ಹೇಳಿದರು.

ಈಗಾಗಲೇ ಕಾವೇರಿ ನೀರು ನಿರ್ವಹಣಾ ಪುಟ 2ಕ್ಕೆ

### ಗುಟ್ಕಾ, ಪಾನ್ ಮಸಾಲ ನಿಷೇಧ

**ಬೆಂಗಳೂರು:** ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಹಾಗೂ ಪಾನ್ ಮಸಾಲವನ್ನು ರಾಜ್ಯದಾದ್ಯಂತ ನಿಷೇಧಿಸಿ ಆಹಾರ ಸುರಕ್ಷತೆ ಇಲಾಖೆ ಆದೇಶ ಹೊರಡಿಸಿದೆ. ಈ ಆದೇಶ ಒಂದು ವರ್ಷದ ಅವಧಿಗೆ ಅನ್ವಯ ಆಗಲಿದೆ.

ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಹಾಗೂ ಪಾನ್ ಮಸಾಲ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ, ಸಾಗಣೆ, ವಿತರಣೆ ಮತ್ತು ಮಾರಾಟವನ್ನು ನಿಷೇಧಿಸಲಾಗಿದೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅಡಿ ಕ್ರಮಕೈಗೊಳ್ಳಲಾಗಿದೆ.

ಗುಟ್ಕಾ ಹಾಗೂ ಪಾನ್ ಮಸಾಲದ ಜತೆಗೆ, ತಂಬಾಕು ಅಥವಾ ನಿಕೋಟಿನ್ ಹೊಂದಿರುವ ಇತರೆ ಉತ್ಪನ್ನಗಳನ್ನೂ ಪ್ರತ್ಯೇಕವಾಗಿ ಮಾರಾಟ ಮಾಡುವುದನ್ನು ನಿಷೇಧ ಮಾಡಲಾಗಿದೆ. ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಮತ್ತು ಪಾನ್ ಮಸಾಲಾವನ್ನು ಸ್ಯಾಶೆ, ಪೌಚ್, ಪೊಟ್ಟಣ ಹಾಗೂ ಕಂಟೇನರ್ ಸೇರಿ ಯಾವುದೇ ವಿಧಾನಗಳಲ್ಲಿ ಸಂಗ್ರಹ ಮತ್ತು ಮಾರಾಟಕ್ಕೆ ಅವಕಾಶವಿಲ್ಲ ಎಂದು ಇಲಾಖೆ ತಿಳಿಸಿದೆ.

### ಟಾಟಾ ಸನ್ಸ್ ಕಾರ್ಯಾಧ್ಯಕ್ಷ ಚಂದ್ರಶೇಖರನ್ ರಾಜೀನಾಮೆ

**ಮುಂಬೈ:** ಟಾಟಾ ಸನ್ಸ್ ಕಾರ್ಯಾಧ್ಯಕ್ಷ ಎನ್.ಚಂದ್ರಶೇಖರನ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಪ್ರಸ್ತುತ ಅವಧಿ ಪೂರ್ಣಗೊಂಡ ನಂತರ ಮರುನೇಮಕಗೊಳ್ಳಲು ತಾನು ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಆಗಸ್ಟ್ 18 ರಂದು ನಡೆಯಲಿರುವ ಟಾಟಾ ಸನ್ಸ್ ವರ್ಷಿಕ ಮಹಾಸಭೆಗೂ ಮುನ್ನವೇ ಈ ಮಹತ್ವದ ಬೆಳವಣಿಗೆ ನಡೆದಿದೆ. 2027ರ ಫೆಬ್ರವರಿವರೆಗೆ ಚಂದ್ರಶೇಖರನ್ ಅವರ ಅಧಿಕಾರವಧಿ ಇದೆ. ಆಗಸ್ಟ್ 18ರ ಎಜಿಎಂ ಸಭೆಯಲ್ಲಿ ಅವರ ಮರುನೇಮಕದ ಕುರಿತು ಪಾಲುದಾರರು ಮತದಾನ ಮಾಡಬೇಕಿತ್ತು. ಪುಟ 2ಕ್ಕೆ

### ಪ್ರಜ್ವಲ್ ರೇವಣ್ಣ ಬಳಿ ಮೊಬೈಲ್ ಪತ್ತೆ

**ಬೆಂಗಳೂರು:** ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸೆಲ್‌ನಲ್ಲಿ ಮೊಬೈಲ್ ಫೋನ್ ಪತ್ತೆಯಾಗಿದೆ. ಸಿಸಿಬಿ ಅಧಿಕಾರಿಗಳು ನಡೆಸಿದ ದಿಢೀರ್ ಪರಿಶೀಲನೆ ವೇಳೆ ಪ್ರಜ್ವಲ್ ರೇವಣ್ಣ ಪುಟ 2ಕ್ಕೆ



### ಜೈಲಾಧಿಕಾರಿ ಅಮಾನತು

**ಬೆಂಗಳೂರು:** ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಪ್ರಜ್ವಲ್ ರೇವಣ್ಣ ಸೆಲ್‌ನಲ್ಲಿ ಮೊಬೈಲ್ ಪತ್ತೆಯಾದ ಕೇಸ್ ಸಂಬಂಧ ಜೈಲಾಧಿಕಾರಿಯನ್ನು ಸಸ್ಪೆಂಡ್ ಮಾಡಿ ಡಿಜಿಪಿ ಅಲೋಕ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ಕರ್ತವ್ಯ ಲೋಪ ಹಿನ್ನೆಲೆ ಜೈಲಿನ ಅಸಿಸ್ಟೆಂಟ್ ಸೂಪರಿಂಡೆಂಟ್ ಈರಣ್ಣ ರಂಗಾಪುರ ಅನ್ನು ಸಸ್ಪೆಂಡ್ ಮಾಡಿದ್ದಾರೆ. ಅಲ್ಲದೆ, ಕಾರಣ ಕೇಳಿ ಜೈಲು ಎಸ್‌ಪಿ ಅನ್ಶುಕುಮಾರ್‌ಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಖೈದಿಗಳು ಧರಿಸುವ ಬಿಳಿ ಬಟ್ಟೆ ಧರಿಸುತ್ತಿರಲಿಲ್ಲ. ಇದೀಗ ಅಂಡ್ರಾಯ್ಡ್ ಮೊಬೈಲ್ ಸಹ ಸಿಕ್ಕಿದೆ.

## ಕಬಿನಿಯಿಂದ 10 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

**ಬೆಂಗಳೂರು:** ಕಾವೇರಿ ನದಿ ನೀರು ಹಂಚಿಕೆ ವಿವಾದದ ನಡುವೆಯೇ ಕಾವೇರಿ ಕೊಳ್ಳದ ಪ್ರಮುಖ ಜಲಾಶಯವಾದ ಕಬಿನಿಯಿಂದ 10 ಸಾವಿರ ಕ್ಯೂಸೆಕ್ ನೀರು ಬಿಡಲಾಗಿದೆ.

ಕೇರಳ ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕಪಿಲಾ ನದಿ ಮೂಲಕ ಸುಮಾರು 8800 ಸಾವಿರ ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಆದರೆ, ಅದಕ್ಕೂ ಹೆಚ್ಚು ನೀರನ್ನು ನದಿಗೆ ಬಿಡಲಾಗಿದೆ. ಜಲಾಶಯದಲ್ಲೂ ಶೇ 95ರಷ್ಟು ನೀರು ಸಂಗ್ರ ಹವಾಗಿದೆ. ಜಲಾಶಯದ ನೀರಿನ ಮಟ್ಟವು ಸದ್ಯ 2282.59 ಅಡಿ ಇದೆ. 18.61 ಟಿಎಂಸಿ ನೀರು ಲಭ್ಯವಿದೆ. ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಸುಮಾರು 10 ಸಾವಿರ ಕ್ಯೂಸೆಕ್ ನೀರನ್ನು ನದಿ ಮೂಲಕ ಹರಿಬಿಡಲಾಗುತ್ತಿದೆ.

ಜಲಾಶಯದ ಗರಿಷ್ಠ ನೀರಿನ ಮಟ್ಟ 2284 ಅಡಿ. ಜಲಾಶಯದಲ್ಲಿ 19.52 ಟಿಎಂಸಿ ನೀರು ಸಂಗ್ರಹಿಸಲು ಅವಕಾಶವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2281.76 ಅಡಿ ನೀರಿತ್ತು. 18.09 ಟಿಎಂಸಿ ನೀರು ಸಂಗ್ರಹವಿತ್ತು. ಕಾವೇರಿ ಕೊಳ್ಳದ ಇನ್ನೊಂದು ಪ್ರಮುಖ ಜಲಾಶ ಯವಾದ ಕೃಷ್ಣರಾಜ ಸಾಗರಕ್ಕೆ



6473 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕೊಡಗಿನ ಹಾರಂಗಿ ಜಲಾಶಯ ದಿಂದ 6041 ಕ್ಯೂಸೆಕ್ ಹೊರ ಬಿಡುತ್ತಿರುವುದರಿಂದ ಇದು ಕೆಆರ್ ಎಸ್ ಜಲಾಶಯಕ್ಕೆ ಹರಿದು ಬರುತ್ತಿದೆ. ಜಲಾಶಯದ ನೀರಿನ ಮಟ್ಟವು 109.53 ಅಡಿ ಯಿದೆ. ಕಳೆದ ವರ್ಷ ಇದೇ ದಿನ 124.35 ಅಡಿ ನೀರು ಸಂಗ್ರಹವಾಗಿತ್ತು. ಜಲಾಶಯದಿಂದ ಈಗ 2298 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ. ಈ ವರ್ಷ ಜಲಾ ಶಯ ತುಂಬಲು ಇನ್ನೂ 15 ಅಡಿ ನೀರು ಬೇಕಿದೆ. ಅಂದರೆ ಸುಮಾರು 18 ಟಿಎಂಸಿ ನೀರು ಬೇಕು. ಕೊಡಗಿನ ಹಾರಂಗಿ ಜಲಾಶಯಕ್ಕೆ ಈಗಲೂ 6153 ಕ್ಯೂಸೆಕ್ ನೀರು ಹರಿದು ಪುಟ 2ಕ್ಕೆ

### ಬಂದ್‌ಗೆ ಖಾಸಗಿ ಶಾಲೆಗಳ ಬೆಂಬಲ ವಾಪಸ್: ರಜೆ ಇಲ್ಲ

**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಕೆಲವು ಸಂಘಟನೆಗಳು ನಾಳೆ ಗುರುವಾರ ಆಗಸ್ಟ್ 13ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಹಭಾಗಿತ್ವ ನಿರ್ವಹಣಾ ಸಂಘ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದಿದೆ.

ಆಗಸ್ಟ್ 13ರಂದು ಶಾಲೆಗಳನ್ನು ಬಂದ್ ಮಾಡುವುದಿಲ್ಲ ಎಂದು ಸಂಘಟನೆ ತಿಳಿಸಿದೆ. ಆದರೆ, ಬಂದ್‌ಗೆ ನೈತಿಕ ಬೆಂಬಲ ನೀಡುವುದಾಗಿ ಸ್ಪಷ್ಟಪಡಿಸಿದೆ.

ಶಾಲೆಗಳನ್ನು ಮುಚ್ಚಲು ಸಾಧ್ಯವಾಗದಿರುವುದಕ್ಕೆ ಕಾರಣ ನೀಡಿರುವ ಸಂಘಟನೆ, ವಿಶೇಷ ತೀವ್ರ ಪುಟ 2ಕ್ಕೆ



## ಸುಪ್ರೀಂ ಕೋರ್ಟ್ ತೀರ್ಪು ಪಾಲನೆ ಅನಿವಾರ್ಯ: ಎಚ್.ಡಿ.ಕುಮಾರಸ್ವಾಮಿ

**ನವದೆಹಲಿ:** ತಮಿಳುನಾಡಿಗೆ ನಿತ್ಯ 12,000 ಕ್ಯುಸೆಕ್ ಕಾವೇರಿ ನೀರನ್ನು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕರ್ನಾಟಕಕ್ಕೆ ನಿರ್ದೇಶನ ನೀಡಿರುವ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿದ್ದಾರೆ.

ದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆಯನ್ನು ಟೀಕಿಸಿರುವ ಅವರು, ಸುಪ್ರೀಂ ಕೋರ್ಟ್ ಆದೇಶ ಪಾಲಿಸುವುದು ರಾಜ್ಯಕ್ಕೆ ಅನಿವಾರ್ಯ ಎಂದು ತಿಳಿಸಿದರು.

ಈ ವರ್ಷ ಮಳೆ ಕೊರತೆಯಾಗಲಿದೆ ಎನ್ನುವ ಮಾಹಿತಿ ಮೊದಲೇ ಇತ್ತು. ಆದರೂ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ತಮಿಳುನಾಡಿಗೆ ಹೋಲಿಸಿದರೆ, ರಾಜ್ಯದಲ್ಲಿ ಸರಿಯಾದ ತಯಾರಿ ಆಗಿಲ್ಲ ಎಂದು ಟೀಕಿಸಿದರು.



ತಮಿಳುನಾಡು ಒತ್ತಡ ಹಾಕುವ ಪ್ರಯತ್ನ ಮಾಡಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು, ಕಾವೇರಿ ನೀರು ನಿಯಂತ್ರಣ ಸಮಿತಿ ಮೇಲೆ ಮೇ ತಿಂಗಳಲ್ಲೇ ಒತ್ತಡ ಹೇರಿತ್ತು ಎಂದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ !

ಹೇಳಬಾರದೇ ಗೋಪಿ, ನಿನ್ನ ಮಗಗೆ ಬುದ್ಧಿ ,
ಮೆದ್ದು ಹೋಗುವನವ ಮಡಿಕೆಯ ಬೆಣ್ಣೆಯಾ|

ಸದ್ದು ಮಾಡದೇ ಬರುವ, ಅತ್ತಿತ್ತ ನೋಡುವ,
ಗದ್ದಲವಿಲ್ಲದೆ ಕದವನು ತೆಗೆಯುವ,
ಚಿಣ್ಣರ ಕರೆಯುವ ಬೆಣ್ಣೆಯ ತಿನ್ನುವ,
ಕೋಲಿಗೂ ಹೆದರದೆ,ಯಾರಿಗೂ ಬೆದರದೆ||

ಮೊಸರಿನ ಮಡಿಕೆ ಬಾಯಿಗೆ ಇಡುವ,
ಹೆಪ್ಪಿಗೂ ಇಲ್ಲದಂತೆ ಎಂಜಲವ ಮಾಡುವ,
ಎಲ್ಲಿ ಇಟ್ಟರೂ ಗೋಪಿ ಮಡಿಕೆಯ ಹುಡುಕುವ,
ಗುಮ್ಮನ ಅಂಜಿಕೆ ಕೊಟ್ಟರು ಮಣಿಯದೆ||

ಗೋಗಳ ಕೆಚ್ಚಲಿಗೆ ಬಾಯನು ಹಾಕುವ,
ಗೂಟಕೆ ಕಟ್ಟಿದ ಹಸು,ಕರುಗಳ ಬಿಡುವ,
ಎಲ್ಲಿ ಹೋದರು ನೋಡು ಇವನದೇ ಚರ್ಚೆಯು,
ತಡೆಯಲಾರೆವು ಗೋಪಿ ಇನ್ನು ಹೇಮ ಗಿರೀಶನ||

# ಅಮೃತ ಸರೋವರಗಳಲ್ಲಿ ತ್ರಿವರ್ಣ ಧ್ವಜ

## ಜಲಸಂರಕ್ಷಣೆಯ ಜಾಗೃತಿ ಕಾರ್ಯಕ್ರಮ ಆಯೋಜನೆಗೆ ಜಿಪಂ ಸಿದ್ಧತೆ

ಮೈಸೂರು: ದೇಶವೇ 80ನೇ ಸ್ವಾತಂತ್ರ್ಯೋತ್ಸವ ಸಂಭ್ರಮ ಆಚರಣೆಗೆ ಸಿದ್ಧತೆ ನಡೆಸಿರುವಂತೆ ವಿಬಿ ಜಿ ರಾಮ್ ಜಿ (ಮ-ನರೇಗಾ) ಯೋಜನೆಯಡಿ ಅಭಿವೃದ್ಧಿ ಪಡಿಸಿರುವ 85 ಅಮೃತ ಸರೋವರ ದಂಡೆಗಳ ಮೇಲೂ ತ್ರಿವರ್ಣ ಧ್ವಜ ಹಾರಿಸಿ ಜಲ ಸಂರಕ್ಷಣೆಯ ಜಾಗೃತಿ ಕಾರ್ಯಕ್ರಮ ಆಯೋಜನೆಗೆ ಮೈಸೂರು ಜಿಲ್ಲಾ ಪಂಚಾಯಿತಿ ಸಕಲ ಸಿದ್ಧತೆ ನಡೆಸಿದೆ.

ಕೇಂದ್ರ ಸರ್ಕಾರ ಜಾರಿಗೊಳಿಸಿದ ವಿಬಿ ಜಿ ರಾಮ್ ಜಿ (ಮ-ನರೇಗಾ) ಯೋಜನೆಯಡಿ ಅಭಿವೃದ್ಧಿ ಪಡಿಸಿರುವ 85 ಅಮೃತ ಸರೋವರಗಳ ದಂಡೆ ಮೇಲೂ ಗಣ್ಯರಿಂದ ಧ್ವಜಾರೋಹಣ ನೇರವೇರಿಸಿ ರಾಷ್ಟ್ರಗೀತೆಯ ನಮನ ಸಲ್ಲಿಸಲಾಗುವುದು. ಭಾಗವಹಿಸಿದ ಎಲ್ಲರಿಂದ ತಿರಂಗಯಾತ್ರೆ, ಸ್ಥಳೀಯರು ಹಾಗೂ ಶಾಲಾ ಮಕ್ಕಳಿಂದ ದೇಶ ಭಕ್ತಿಗೀತೆ, ನಾಟಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಬಳಿಕ ಪರಿಸರ ಸಂರಕ್ಷಣೆ ದೃಷ್ಠಿಯಿಂದ ಸ್ವಾತಂತ್ರ್ಯೋತ್ಸವ ನೆನಪಿಗಾಗಿ ಗಿಡ ನೆಡುವುದು. ರಾಜ್ಯದಲ್ಲಿನ ಬರ ಪರಿಸ್ಥಿತಿ ನಿರ್ವಹಣೆ ವೈಯಕ್ತಿಕ ಮತ್ತು ಸಮುದಾಯದ ಜಲ ಸಂರಕ್ಷಣೆ ಕಾಮಗಾರಿಗಳ ಬಗ್ಗೆ ಹಾಗೂ ಜೀವನೋಪಾಯ ಭದ್ರತೆಗಾಗಿ ಗ್ರಾಮೀಣ ಜನರು ವೈಯಕ್ತಿಕ ಸೌಲಭ್ಯಗಳನ್ನು ವಿಬಿ ಜಿ ರಾಮ್ ಜಿ ಯೋಜನೆಯಡಿ ಪಡೆದುಕೊಳ್ಳುವಂತೆ ಜಾಗೃತಿ ಮೂಡಿಸಲು ತಯಾರಿ ನಡೆಸಿದೆ.





ಗ್ರಾಮದ ಜನಪ್ರತಿನಿಧಿಗಳು, ಶಾಲಾ ಮಕ್ಕಳು, ಗ್ರಾಮಸ್ಥರು, ಯುವಕ್ಲಬ್, ಸ್ವಸಹಾಯ ಸಂಘದ ಸದಸ್ಯರು, ಸಮುದಾಯ ಸಂಘ ಹಾಗೂ ಅಧಿಕಾರಿ ಸಿಬ್ಬಂದಿಗಳನ್ನು ಒಳಗೊಂಡಂತೆ ಕಾರ್ಯಕ್ರಮ ಯಶಸ್ವಿಗೊಳಿಸಲು ಮುಂದಾಗುವ ಮೂಲಕ ಈ ಬಾರಿ ಅರ್ಥಪೂರ್ಣ ಸ್ವಾತಂತ್ರ್ಯೋತ್ಸವಕ್ಕೆ ಮುಂದಾಗಿರುವುದು ವಿಶೇಷ. ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ 16, ಹುಣಸೂರು 16, ಮೈಸೂರು 15, ನಂಜನಗೂಡು 5, ಪಿರಿಯಾಪಟ್ಟಣ 4, ಸಾಲಿಗ್ರಾಮ 6, ಸರಗೂರು 8 ಮತ್ತು ತಿ.ನರಸೀಪುರ 15 ಸೇರಿ ಒಟ್ಟು 85 ಅಮೃತ ಸರೋವರ ಕೆರೆಗಳ ದಂಡೆಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಲಿದೆ.



ರಾಜ್ಯ ಸರ್ಕಾರ ಈ ಬಾರಿ ವಿಶೇಷವಾಗಿ ವಿಬಿ ಜಿ ರಾಮ್ ಜಿ ಯೋಜನೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ ಸ್ಥಳೀಯವಾಗಿ ಹೆಚ್ಚು ಉದ್ಯೋಗ ಸೃಷ್ಟಿಸಲು ಪ್ರೇರೆಪಿಸುವುದು. ಜತೆಗೆ ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ವೈಯಕ್ತಿಕ ಹಾಗೂ ಸಮುದಾಯದ ಜಲ ಸಂರಕ್ಷಣೆ ಕಾರ್ಯಕ್ರಮಗಳ ಭದ್ರತೆಗಳ ಬಗ್ಗೆ ಪರಿಚಯಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಮೂಲಕ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮಿಸಲಾಗುತ್ತಿದೆ.

–**ಎಸ್.ಯುಕೇಶ್ ಕುಮಾರ್** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಪಂ, ಮೈಸೂರು



ರಾಜ್ಯದಲ್ಲಿ ಮಳೆ ಅಭಾವ, ಅಂತರ್ಜಲ ಮಟ್ಟ ಕುಸಿಯುತ್ತಿರುವ ಸಂದರ್ಭದಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯ 85 ಅಮೃತ ಸರೋವರಗಳಲ್ಲೂ ಜಲ ಸಂರಕ್ಷಣೆ, ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲಾಗುವುದು. ಅಲ್ಲದೆ, ಸ್ವಾತಂತ್ರ್ಯಕ್ಕಾಗಿ ಸೇವೆ ಸಲ್ಲಿಸಿ ತ್ಯಾಗ ಮಾಡಿದವರ ಸ್ಮರಿಸುವ ಮೂಲಕ ಅವರನ್ನು ಗೌರವಿಸುವ ಕೆಲಸ ಮಾಡಲಾಗುವುದು.

**ಭೀಮಪ್ಪ** ಕ.ಲಾಳಿ, ಉಪಕಾರ್ಯದರ್ಶಿ(ಅಭಿವೃದ್ಧಿ), ಜಿಪಂ, ಮೈಸೂರು

## ಮೊದಲ ಪುಟದಿಂದ

### ದಾಳಿ ಮಾಡಿಸಿದ್ದು ನಾನೇ:

ಅಗ್ರಹಾರಕ್ಕೆ ಹೋಗಿದ್ದೆ. ಅಲ್ಲಿ ಕೆಲವು ಲೋಪಗಳಾಗಿದ್ದವು. ಹೀಗಾಗಿ ಮುಖ್ಯಮಂತ್ರಿ ಅನುಮತಿ ಪಡೆದು ರೇಡ್ ಮಾಡಿಸಿದೆ ಎಂದು ತಿಳಿಸಿದರು. ಅಧಿಕಾರಿಗಳ ಮಾಹಿತಿ ಮೇರೆಗೆ ರೇಡ್ ಮಾಡಿಸಿದ್ದೇನೆ. ಈ ಅಕ್ರಮಕ್ಕೆ ಸಹಕಾರ ಕೊಟ್ಟ ಎಲ್ಲಾ ಅಧಿಕಾರಿಗಳನ್ನು ಅಮಾನತು ಮಾಡಲು ಸೂಚನೆ ನೀಡಿದ್ದೇನೆ. ಪರಪ್ಪನ ಅಗ್ರಹಾರ ಮಾತ್ರವಲ್ಲ, ರಾಜ್ಯದ ಎಲ್ಲಾ ಕಾರಾಗೃಹಗಳ ಮೇಲೆಯೂ ಇಂತಹ ಕಾರ್ಯಾಚರಣೆ ನಡೆಯುತ್ತದೆ. ಇದನ್ನು ನಿರಂತರವಾಗಿ ಮಾಡಬೇಕು. ಕೆಲವು ಅಧಿಕಾರಿಗಳು ತಮ್ಮ ಹಳೆ ಚಾಳಿ ಬಿಟ್ಟಿಲ್ಲ. ಹೀಗಾಗಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದರು.

### ಸುಪ್ರೀಂ ನಿರ್ದೇಶನದಂತೆ ತೀರ್ಮಾನ

ಸಮಿತಿ ಹಾಗೂ ಕಾವೇರಿ ನೀರು ಮೇಲುಸ್ತುವಾರಿ ಸಮಿತಿ ಕಾವೇರಿ ನೀರು ಬಿಡುಗಡೆ ವಿಚಾರವಾಗಿ ನಿರ್ದೇಶನ ನೀಡಿವೆ. ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ಅರ್ಜಿ ಹಾಕಿದೆ. ಸುಪ್ರೀಂ ಕೋರ್ಟ್ ನೀಡುವ ತೀರ್ಪು ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತೇವೆ. ತೀರ್ಪು ನೋಡಿಕೊಂಡು ನಾವು ಮುಂದೆ ಹೋಗುವ ಅವಕಾಶ ಇದೆ ಎಂದು ಹೇಳಿದರು. ಭವಾನಿ ಹಾಗೂ ಮೆಟ್ಟೂರ್ ಜಲಾಶಯಗಳಲ್ಲಿ ಈಗಾಗಲೇ ನೀರು ಇದೆ. ಅಲ್ಲದೇ ತಮಿಳುನಾಡಿನಲ್ಲಿ ಅಂತರ್ಜಲ ಕೂಡ ಚೆನ್ನಾಗಿದೆ. ಅವರಿಗೆ ಇನ್ನೇನು ಹಿಂಗಾರು ಮಳೆ ಕೂಡ ಶುರುವಾಗುತ್ತದೆ. ನಮ್ಮ ಕಾವೇರಿ ವ್ಯಾಪ್ತಿಯ ಜಲಾಶಯಗಳಲ್ಲಿ 76 ಟಿಎಂಸಿ ನೀರು ಈಗ ಇರಬಹುದು. ಜುಲೈ 29ರಿಂದ ಇಲ್ಲಿಯವರೆಗೆ 10 ಟಿಎಂಸಿ ನೀರು ಹೋಗಿದೆ. ಆದರೆ 12 ಸಾವಿರ ಕ್ಯೂಸೆಕ್ ನೀರು ಬಿಡುವ ಆದೇಶ ನಮಗೆ ಸರಿಯಾಗಿಲ್ಲ ಎಂದು ತಿಳಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಚರ್ಚೆಗೆ ಬರಲಿ. ಇಲ್ಲದಿದ್ದರೆ ಯಾರನ್ನಾದರೂ ಕಳುಹಿಸಲಿ. ನಾನು ಜಲಸಂಪನ್ಮೂಲ ಸಚಿವನಾಗಿ ಅವರ ಜೊತೆ ಚರ್ಚೆಗೆ ಸಿದ್ಧನಿದ್ದೇನೆ ಎಂದು ತಿಳಿಸಿದರು.

### ಪೊನ್ನಣ್ಣ, ದೇಶಪಾಂಡೆಗೆ ಸ್ಥಾನ: ಮಂಕಾಳ ವೈದ್ಯ ಉಪಸಭಾಪತಿ

ಸಂಪುಟ ದರ್ಜೆಯ ಸ್ಥಾನಮಾನ ಸಿಗಲಿದೆ. ಸಚಿವ ಸಂಪುಟದಲ್ಲಿ ಪ್ರಬಲ ಆಕಾಂಕ್ಷಿಗಳಾಗಿದ್ದ ಎ.ಎಸ್. ಪೊನ್ನಣ್ಣ ಮತ್ತು ಆರ್.ವಿ. ದೇಶಪಾಂಡೆ ಅವರಿಗೆ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಮಂಕಾಳ ವೈದ್ಯ ಅವರನ್ನು ಉಪ ಸಭಾಪತಿ ಸ್ಥಾನಕ್ಕೆ ಹೆಸರಿಸಲಾಗಿದೆ.

### 10 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಬರುತ್ತಿದ್ದು, ಜಲಾಶಯ ಬಹುತೇಕ ಎರಡು ವಾರದಿಂದಲೂ ಭರ್ತಿ ಇದೆ. ಜಲಾಶಯದಲ್ಲಿ 2858.30 ಅಡಿ ನೀರು ಸಂಗ್ರಹವಿದೆ. ಇಲ್ಲಿ 2859 ಅಡಿ ನೀರು ಸಂಗ್ರಹಿಸಬಹುದು. 8.26 ಟಿಎಂಸಿ ನೀರು ಲಭ್ಯವಿದೆ. ಹಾಸನ ಜಿಲ್ಲೆಯ ಹೇಮಾವತಿ ಜಲಾಶಯಕ್ಕೆ ಒಳಹರಿವು ಕಡಿಮೆಯಾಗಿದೆ. ಸದ್ಯ 3216 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯ ಶೇ 84ರಷ್ಟು ಭರ್ತಿಯಾಗಿದೆ. ಸದ್ಯ 2915.70 ಅಡಿ ನೀರು ಜಲಾಶಯದಲ್ಲಿದ್ದು, 31.28 ಟಿಎಂಸಿ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ದಿನ 37 ಟಿಎಂಸಿ ನೀರಿತ್ತು.

### ಚಂದ್ರಶೇಖರನ್ ರಾಜೀನಾಮೆ

ಈ ಪ್ರಕ್ರಿಯೆ ನಡೆಯುವ ಮೊದಲೇ ಚಂದ್ರಶೇಖರನ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ. ಈಗ ರಾಜೀನಾಮೆ ಸಲ್ಲಿಸಿದ್ದರೂ ಮುಂದಿನ ಫೆಬ್ರವರಿವರೆಗೆ ಚಂದ್ರಶೇಖರ್ ಅವರು ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ. ಟಾಟಾ ಸಮೂಹದ ದತ್ತಿ ಸಂಸ್ಥೆಯಾದ ಟಾಟಾ ಟ್ರಸ್ಟ್ ಅಧ್ಯಕ್ಷ ನೋಯೆಲ್ ಟಾಟಾ ಅವರು ಚಂದ್ರಶೇಖರನ್ ಮರುನೇಮಕಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

### ಇಂದು ಕರ್ನಾಟಕ ಬಂದ್

ಕಾವೇರಿ ನೀರು ನಿರ್ವಹಣಾ ಸಮಿತಿ 15 ದಿನಗಳ ಕಾಲ ಪ್ರತಿನಿತ್ಯ 12 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ಕರ್ನಾಟಕಕ್ಕೆ ಸೂಚನೆ ನೀಡಿರುವುದನ್ನು ಖಂಡಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಕರ್ನಾಟಕ ಬಂದ್ ಗೆ ಕರೆ ನೀಡಿದ್ದಾರೆ.

# ನಾಗೇಂದ್ರ ಕೈ ಬಿಡುವಂತೆ ಬಿಜೆಪಿ ಅಹೋರಾತ್ರಿ ಹೋರಾಟ

ಮೈಸೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ತನಿಖೆ ಎದುರಿಸುತ್ತಿರುವ ಶಾಸಕ ಬಿ. ನಾಗೇಂದ್ರರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿರುವುದು ಸರಿಯಲ್ಲ. ಅವರನ್ನು ಸಂಪುಟದಿಂದ ಕೈ ಬಿಡುವವರೆಗೂ ಜಿಲ್ಲಾಧಿಕಾರಿ ಕಚೇರಿ ಬಳಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.

ಬುಧವಾರ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡಿ ತನಿಖೆ ಪೂರ್ಣಗೊಳ್ಳದೆ, ನ್ಯಾಯಾಲಯದಿಂದ ಕ್ಲೀನ್ ಚಿಟ್ ಸಿಗದಿದ್ದರೂ ನಾಗೇಂದ್ರ ಅವರನ್ನು ಸಂಪುಟಕ್ಕೆ ತಗೆದುಕೊಳ್ಳುವ ಅನಿವಾರ್ಯತೆ ಡಿ.ಕೆ.ಶಿವಕುಮಾರ್ ಅವರಿಗೆ ಏನಿತ್ತು? ಹಿರಿಯ ಶಾಸಕರ ವಿರೋಧದ ನಡುವೆಯೂ ಈ ನಿರ್ಧಾರ ಕೈಗೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಒತ್ತಡವಿದೆಯೇ ಅಥವಾ ಪರಿಶಿಷ್ಟ ಪಂಗಡದ ನಿರ್ದಿಷ್ಟ ವೋಟ್ ಬ್ಯಾಂಕ್ ಕೈ ತಪ್ಪಲಿದೆ ಎಂಬ ಹೆದರಿಕೆಯೇ? ನಾಗೇಂದ್ರ ಅವರ ಮೇಲೆ ತನಿಖೆ ನಡೆಯುತ್ತಿದ್ದು, ಆರೋಪ ಸಾಭೀತಾದರೆ ಮತ್ತೆ ರಾಜೀನಾಮೆ ಪಡೆಯಬೇಕಾಗುತ್ತದೆ. ಇಷ್ಟೆಲ್ಲಾ ವಿರೋಧವಿದ್ದರೂ ಸಂಪುಟಕ್ಕೆ ಸೇರಿಸಿಕೊಳ್ಳುವ ಹಠ ಯಾಕೆ ಎಂದು ರಾಜ್ಯದ ಜನತೆಗೆ ತಿಳಿಸಿ ಎಂದು ಆಗ್ರಹಿಸಿದರು.



ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಹಣವನ್ನು ತೆಲಂಗಾಣದ ಬ್ಯಾಂಕ್‌ಗಳಿಗೆ ಅಕ್ರಮವಾಗಿ ವರ್ಗಾಯಿಸಿ, ಚುನಾವಣೆಗೆ ಮತ್ತು ವೈಯಕ್ತಿಕ ಲಾಭಕ್ಕೆ ಬಳಸಿರುವುದು ಸಾಬೀತಾಗಿದೆ. ಈ ವಿಚಾರದಲ್ಲಿ ಸ್ವತಃ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಅಕ್ರಮ ನಡೆದಿರುವುದನ್ನು ಒಪ್ಪಿಕೊಂಡಿದ್ದಾರೆ. ಇಂತಹ ಗಂಭೀರ ಆರೋಪ ಎದುರಿಸುತ್ತಿರುವವರನ್ನು ಮತ್ತೆ ಮಂತ್ರಿ ಮಾಡುವುದು ಪರಿಶಿಷ್ಟ ಪಂಗಡಕ್ಕೆ ಬಗೆಯುವ ದ್ರೋಹ ಎಂದು ಕಿಡಿಕಾರಿದರು. ನಾಗೇಂದ್ರ ಅವರಿಗೆ ಮತ್ತೆ ಮಂತ್ರಿಗಿರಿ ನೀಡುವುದನ್ನು ವಿರೋಧಿಸಿ ಗುರುವಾರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗುವುದು. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಸೋಮವಾರದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದರು. ಗೋಷ್ಠಿಯಲ್ಲಿ ಮಾಜಿ ಶಾಸಕ ಹರ್ಷವರ್ಧನ್, ಮುಖಂಡರಾದ ಈ.ಸಿ.ನಿಂಗರಾಜೇಗೌಡ, ಮೋಹನ್, ಮಹೇಶ್ ರಾಜೇ ಅರಸ್, ವಸಂತ್ ಕುಮಾರ್, ಕಿರಣ್ ಗೌಡ ಇತರರು ಇದ್ದರು.

ನಾಗೇಂದ್ರ ಅವರ ಮೇಲೆ ಸಿಬಿಐ, ಎಸ್‌ಐಟಿ ಹಾಗೂ ಸಿಐಡಿ ಸೇರಿದಂತೆ ಒಟ್ಟು 31 ಪ್ರಕರಣಗಳಿವೆ. ಸಾರ್ವಜನಿಕರ ತೆರಿಗೆ ಹಣವನ್ನು ನುಂಗಿ ನೀರು ಕುಡಿದವರನ್ನು ಮತ್ತೆ ಸಚಿವರನ್ನಾಗಿ ಮಾಡಲು ಹೊರಟಿರುವುದು ಕಾಂಗ್ರೆಸ್ ಪಕ್ಷದ ಭ್ರಷ್ಟ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ಅವರನ್ನು ಸಂಪುಟದಿಂದ ಕೈಬಿಡುವವರೆಗೆ ಹೋರಾಟ ಮುಂದುವರಿಯಲಿದೆ.

–**ಕುಂಬ್ರಳ್ಳಿ ಸುಬ್ಬಣ್ಣ**, ಬಿಜೆಪಿ ಜಿಲ್ಲಾಧ್ಯಕ್ಷ

ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ಕೈಬಿಡುವಂತೆ ಬೀದಿಯಲ್ಲಿ ಹೋರಾಟ ಮಾಡಲು ಆಗಲ್ಲ. ಹೀಗಾಗಿ ಸದನದ ಒಳಗೆ ಹೋರಾಟ ಮಾಡಲು ನಿರ್ಧರಿಸಿದ್ದೇವೆ. ಸಂಪುಟದಿಂದ ಕೈಬಿಡುವವರೆಗೂ ಸದನ ನಡೆಯಲು ಅವಕಾಶ ನೀಡುವುದಿಲ್ಲ.

–**ಟಿ.ಎಸ್.ಶ್ರೀವತ್ಸ** ಶಾಸಕ

## ಮೊದಲ ಪುಟದಿಂದ

### ಪ್ರಜ್ವಲ್ ಬಳಿ ಮೊಬೈಲ್ ಪತ್ತೆ

ಬ್ಯಾರಕ್‌ನಲ್ಲಿ ಆಂಡ್ರಾಯ್ಡ್ ಮೊಬೈಲ್ ಪತ್ತೆಯಾಗಿದೆ. ಜೈಲಿನೊಳಗೆ ನಿಷೇಧಿತ ಮೊಬೈಲ್ ಸಾಧನ ಹೇಗೆ ತಲುಪಿತು ಎಂಬ ಕುರಿತು ಸಮಗ್ರ ತನಿಖೆ ನಡೆಸಲು ಪೊಲೀಸರು ನಿರ್ಧರಿಸಿದ್ದಾರೆ. ಈ ಬ್ಯಾರಕ್‌ನಲ್ಲಿ ಪ್ರಜ್ವಲ್ ರೇವಣ್ಣ ಹಾಗೂ ಪ್ರತಾಪ್ ರೈ ಎಂಬ ಮತ್ತೊಬ್ಬ ಸಜಾಬಂಧಿ ಮಾತ್ರ ವಾಸವಿದ್ದರು. ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರತಾಪ್ ರೈ ಎ1 ಹಾಗೂ ಪ್ರಜ್ವಲ್ ರೇವಣ್ಣ ಎ2 ಆರೋಪಿಯನ್ನಾಗಿ ಮಾಡಲಾಗಿದೆ. ಈ ನಿಷೇಧಿತ ವಸ್ತುಗಳನ್ನು ಪ್ರಜ್ವಲ್ ರೇವಣ್ಣ ಬಳಸುತ್ತಿದ್ದರೇ ಅಥವಾ ಪ್ರತಾಪ್ ರೈ ಬಳಸುತ್ತಿದ್ದನೇ ಎಂಬ ಬಗ್ಗೆ ಸಿಸಿಬಿ ಪೊಲೀಸರು ತೀವ್ರ ತನಿಖೆ ಆರಂಭಿಸಿದ್ದಾರೆ.

### ಬೆಂಬಲ ವಾಪಸ್: ರಜೆ ಇಲ್ಲ

ಪರಿಷ್ಕರಣೆ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಿದ್ದರಿಂದ ಈಗಾಗಲೇ ಶೈಕ್ಷಣಿಕ ಚಟುವಟಿಕೆ ತೀವ್ರವಾಗಿ ಬಾಧಿತವಾಗಿವೆ. ಶಿಕ್ಷಕರ ತೀವ್ರ ಕೊರತೆ ಎದುರಿಸುತ್ತಿರುವ ಸರ್ಕಾರಿ ಅನುದಾನಿತ ಶಾಲೆಗಳಿಗೆ ಶಾಲೆಗಳನ್ನು ಮುಚ್ಚುವುದರಿಂದ ಮತ್ತಷ್ಟು ಸಮಸ್ಯೆಯಾಗಲಿದೆ ಎಂದು ಸಂಘಟನೆ ಹೇಳಿದೆ. ಆದರೆ, ಬಂದ್‌ಗೆ ಸಾಂಕೇತಿಕ ಬೆಂಬಲ ಸೂಚಿಸುವ ಸಲುವಾಗಿ ಶಾಲಾ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ಕಪ್ಪು ರಿಬ್ಬನ್ ಅಥವಾ ಕಪ್ಪು ಪಟ್ಟಿಯನ್ನು ಧರಿಸಲಿದ್ದಾರೆ ಎಂದು ಸಂಘಟನೆ ತಿಳಿಸಿದೆ.

### ಆ.15ಕ್ಕೆ ಟ್ರಸ್ಟ್ ವಾರ್ಷಿಕೋತ್ಸವ

ಮೈಸೂರು: ಕುವೆಂಪುಗರಿದ ಕುವೆಂಪು ವಿಶ್ವ ಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆ.15 ರಂದು ಬಡಾವಣೆಯ ಸೌಗಂಧಿಕ ಉದ್ಯಾನದಲ್ಲಿ ಎರಡನೇ ವಾರ್ಷಿಕೋತ್ಸವ ಸಮಾರಂಭ ನಡೆಯಲಿದೆ ಎಂದು ಅಧ್ಯಕ್ಷ ಎಚ್.ಕೆ.ರಾಮು ತಿಳಿಸಿದರು.

ಡಾ. ನಿರ್ಮಲಾನಂದನಾಥ ಶ್ರೀಗಳು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತರತ್ನ ಪುರಸ್ಕಾರಕ್ಕೆ ಶಿಫಾರಸು ಮಾಡಿದ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಗೌರಿಸಲಾಗುವುದು. ಇದಲ್ಲದೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ, ಕ್ರೀಡಾಕೂಟ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದರು. ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಲಿದ್ದು, ಸಚಿವ ಚಲುವರಾಯಸ್ವಾಮಿ ಅಭಿನಂದಿಸುವರು, ಇದಲ್ಲದೆ, ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಉಚಿತ ಆರೋಗ್ಯ ತಪಾಸಣೆ, ಮಧ್ಯಾಹ್ನ 3ಕ್ಕೆ ಜಲಗಾರ ನಾಟಕ ಪ್ರದರ್ಶನವಿದೆ ಎಂದು ಮಾಹಿತಿ ನೀಡಿದರು. ಡಾ.ಪ್ರಧಾನ ಗುರುದತ್, ಪ್ರೊ.ಚಂದ್ರಶೇಖರಗೌಡ, ಪ್ರೊ.ಸಿ.ನಾಗಣ್ಣ, ಮೋದಾಮಣಿ, ಸುಶೀಲಾ ನಂಜಪ್ಪ, ಡಾ.ಕೆ.ಬಿ.ಲಿಂಗರಾಜು, ಕೆ.ಉಮಾಶಂಕರ್, ಪಿ.ಗಂಗಾಧರಗೌಡ ಇದ್ದರು.



### ಪೊಲೀಸರಿಂದ ಅನ್ನಸಂತರ್ಪಣೆ




ಮೈಸೂರು: ಮೈಸೂರು ನಗರ ಪೊಲೀಸ್ ಆಯುಕ್ತರು ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಸ್ವತಃ ನಿಂತು ಭಕ್ತರಿಗೆ ಅನ್ನದಾನ ಮಾಡುವ ಮೂಲಕ ಗಮನ ಸೆಳೆದರು.

ದೇವಾಲಯ ದರ್ಶನಕ್ಕೆ ಬಂದಿದ್ದ ಸಾವಿರಾರು ಭಕ್ತರಿಗೆ ಆಯುಕ್ತರು ಯಾವುದೇ ವಿಐಪಿ ವ್ಯವಸ್ಥೆ ಇಲ್ಲದೆ, ಸಾಮಾನ್ಯರಂತೆ ಸಾಲಿನಲ್ಲಿ ನಿಂತು ತಮ್ಮ ಕೈಯಾರೆ ಅನ್ನ, ಸಾಂಬಾರ್ ಮತ್ತು ಪ್ರಸಾದವನ್ನು ವಿತರಿಸಿದರು. ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ವಿಶೇಷ ಆದ್ಯತೆ ನೀಡಿದ್ದು ವಿಶೇಷವಾಗಿದೆ.

## ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಹೇಳಿಕೆ

# ಕ್ವಿಟ್ ಇಂಡಿಯಾ ಚಳವಳಿ ಒಂದು ಐತಿಹಾಸಿಕ ಹೋರಾಟ

ಚಾಮರಾಜನಗರ: ಮಹಾತ್ಮಗಾಂಧಿಜೀ ಅವರ ನೇತೃತ್ವದಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳುವಳಿಯು ಭಾರತ ಸ್ವಾತಂತ್ರ್ಯ ಸಂಗ್ರಾಮದ ಒಂದು ಐತಿಹಾಸಿಕ ಹೋರಾಟ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ವತಿಯಿಂದ ಕ್ವಿಟ್ ಇಂಡಿಯಾ ಚಳುವಳಿ ದಿನಾಚರಣೆ, ಕ್ವಿಟ್ ಇಂಡಿಯಾ ಚಳುವಳಿಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಗಾಂಧಿವಾದಿ ಸಿ.ರಂಗಸ್ವಾಮಿರವರ ಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗಾಂಧೀಜಿಯವರ ಮಾಡು ಇಲ್ಲವೇ ಮಡಿ ಎನ್ನುವ ಕರೆಯು ದೇಶದ ಜನರಲ್ಲಿ ಹೊಸ ಕ್ರಾಂತಿಯ ಕಿಚ್ಚು ಹೊತ್ತಿಸಿತು ಸ್ವಾತಂತ್ರ್ಯ ಚಳುವಳಿ ಜನರ ಸಾಮಾನ್ಯರ ಚಳವಳಿಯಾಯಿತು. ಅಂತಹ ಐತಿಹಾಸಿಕ ಹೋರಾಟದಲ್ಲಿ ಚಾ.ರಂ.ಶ್ರೀನಿವಾಸಗೌಡ ಅವರ ತಂದೆ ರಂಗಸ್ವಾಮಿ ಇತರ ಸಹಭಾಗಿತ್ವದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ನಡೆದಿರುವುದು ಬಹಳ ಹೆಮ್ಮೆಯ ವಿಚಾರವಾಗಿದೆ ಇಂತಹ ಸ್ವಾತಂತ್ರ್ಯ ಹೋರಾಟಗಾರ ಸ್ಮರಣೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಹರವೆ ವಿರಕ್ತ ಮಠದ ಸರ್ಪಭೂಷಣಸ್ವಾಮೀಜಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಣೆ ಮಾಡುವುದು ಪ್ರಮುಖವಾದದ್ದು, ಆಗಸ್ಟ್ 8, 1942ರಂದು ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಯು ಬ್ರಿಟಿಷರ ಆಡಳಿತವನ್ನು ಅಂತ್ಯಗೊಳಿಸಲು ಕರೆ ನೀಡಿದ ಐತಿಹಾಸಿಕ ಹೋರಾಟವಾಗಿದೆ. ಗಾಂಧೀಜಿಯವರ ಮಾಡು ಇಲ್ಲವೆ ಮಡಿ ಕರೆಯು ಕೋಟ್ಯಂತರ ಭಾರತೀಯರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮಕುವಂತೆ ಮಾಡಿತು ಎಂದರು.

ಸನ್ಮಾನ ಸ್ವೀಕರಿಸಿದ ಜಿ.ಪಂ. ಮಾಜಿ ಅಧ್ಯಕ್ಷ. ಎಂ.ರಾಮಚಂದ್ರ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ಫಲವಾಗಿ ನಾವೆಲ್ಲರೂ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನೆಮ್ಮದಿ ಜೀವನ ಸಾಗಿಸುತಿದ್ದೇವೆ. ಪ್ರಸ್ತುತ ದಿನಗಳಲ್ಲಿ ಯುವ ಜನಾಂಗದಲ್ಲಿ ಗಾಂಧೀಜಿಯವರ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ವಿದ್ಯಾರ್ಥಿ ಜೀವನದಲ್ಲಿ ಹೋರಾಟಗಾರರನ್ನು ಮರೆಯುವ ಕೆಲಸ ಆಗುತ್ತಿದೆ ಆಗಾಗಿ ಪಠ್ಯಪುಸ್ತಕಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಮಹಾರಾಜರು, ಧರ್ಮ, ಸಂಸ್ಕೃತಿ ಇರುತ್ತಿತ್ತು. ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿ ಅಂತಹ ಪಠ್ಯಗಳನ್ನು ಓದುವ ಅವಕಾಶ ಕಳೆದುಕೊಳ್ಳಲಾಗುತ್ತಿದೆ. ಸರ್ಕಾರಗಳು ಪಠ್ಯದ ಮೂಲಕ ಇತಿಹಾಸವನ್ನು ತಿಳಿಸುವ ಕೆಲಸ ಮಾಡಬೇಕಿದೆ ಎಂದು ಒತ್ತಾಯಿಸಿದರು.

ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಮಾತನಾಡಿ, ಜನಪ್ರತಿನಿಧಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಅರಿವು ಇಲ್ಲ. ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯನ್ನು ಕೊಟ್ಟದ್ದು ವಂದೇ ಮಾತರಂ ಅದನ್ನ ಹಾಡಲೇಬೇಕು ಎಂದರು.

**ಸನ್ಮಾನ:** ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು, ತಾ.ಪಂ.ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್‌ಋಗ್ವೇದಿ ವಿಚಾರ ಮಂಡನೆ ಮಾಡಿದರು. ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ಶಾ.ಮುರಳಿ, ಗಣಿ ಉದ್ಯಮಿ ಶ್ರೀನಿಧಿಕುದರ್, ಚಾ.ವೆಂ.ರಾಜ್ ಗೋಪಾಲ್, ಪಣ್ಯದಹುಂಡಿರಾಜು, ಶಿವಣ್ಣ ಹೊಸೂರು, ರವಿಚಂದ್ರಪ್ರಸಾದ್, ಲೋಕೇಶ್, ಲಿಂಗರಾಜು ಇತರರು. ಹಾಜರಿದ್ದರು

### ಸಾಧಕರಿಂದ ಸನ್ಮಾನಕ್ಕಾಗಿ ಅರ್ಜಿ ಆಹ್ವಾನ

ಸರಗೂರು: ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆ.15ರಂದು ತಾಲೂಕು ಆಡಳಿತ ಸೌಧದಲ್ಲಿ ಆಚರಿಸುವ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಾಧಕರಿಗೆ ಸನ್ಮಾನ ಮಾಡಲು ನಿರ್ಧರಿಸಲಾಗಿದೆ.

ಸರಗೂರು ತಾಲೂಕಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಅರ್ಹ ಸಾಧಕರು ಸ್ವಯಂ ಭರ್ತಿ ಮಾಡಿದ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ದಿ.13ರ ಸ.5:30ರೊಳಗೆ ತಾಲೂಕು ಕಚೇರಿಗೆ ಸಲ್ಲಿಸುವಂತೆ ತಹಶೀಲ್ದಾರ್ ಮೋಹನಕುಮಾರಿ ತಿಳಿಸಿದ್ದಾರೆ.

# ಬರ: ಕುಡಿಯುವ ನೀರಿಗೆ ಸಮಸ್ಯೆಯಾಗದಿರಲಿ

## ಜಿಲ್ಲೆಯಲ್ಲಿಯೂ ಮಳೆ ಕೊರತೆ, ಎಚ್ಚರವಹಿಸಿ: ಸಚಿವ ಬಾಲಕೃಷ್ಣ | ಬರ ಮತ್ತು ಕುಡಿಯುವ ನೀರಿನ ವಿಚಾರ ಅಧಿಕಾರಿಗಳ ಸಭೆ

ರಾಮನಗರ: ಜಿಲ್ಲೆಯಲ್ಲಿ ಜುಲೈ ಮಾಹೆಯಲ್ಲಿ ಅತಿ ಕಡಿಮೆ ಮಳೆಯಾಗಿ, ಕೊರತೆಯಾಗಿದೆ. ಬರ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಜವಾಬ್ದಾರಿಯಾಗಿ ಕಾರ್ಯನಿರ್ವಹಿಸಬೇಕು. ಜಿಲ್ಲೆಯಲ್ಲಿರುವ ಮಳೆ ಮಾಪನ ಕೇಂದ್ರಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲನೆ ನಡೆಸಿ, ಕಾಯಾಚರಣೆಯಲ್ಲಿಲ್ಲದ ಮಳೆ ಮಾಪಕಗಳನ್ನು ದುರಸ್ಥಿಗೊಳಿಸಬೇಕು ಎಂದು ಪ್ರಕೃತಿ ವಿಕೋಪ ಮೇಲುಸ್ತುವಾರಿ ಸಚಿವ ಎಚ್.ಸಿ.ಬಾಲಕೃಷ್ಣ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿಪತ್ತು ನಿರ್ವಹಣೆ, ಬರ ಹಾಗೂ ಕುಡಿಯುವ ನೀರು ವಿಷಯಗಳ ಕುರಿತ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.



### ರಸಗೊಬ್ಬರ ಏಜೆನ್ಸಿಗಳ ಸಭೆ ಆಯೋಜಿಸಲು ಸೂಚನೆ

ಜಿಲ್ಲೆಯಲ್ಲಿ 23,000 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆಯಿದ್ದು, 19,000 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಾಗಿತ್ತು. 13,000 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದ್ದು, 6,000 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ ಎಂದು ಕೃಷಿ ಜಂಟಿ ನಿರ್ದೇಶಕರು ಮಾಹಿತಿ ನೀಡಿದಾಗ ಪ್ರತಿಕ್ರಿಯಿಸಿದ ಸಚಿವರು. ರಸಗೊಬ್ಬರ ವಿತರಿಸುವ ಏಜೆನ್ಸಿಗಳು ರೈತರಿಗೆ ಅವಶ್ಯವಿರುವ ರಸಗೊಬ್ಬರಗಳನ್ನು ಮಾತ್ರ ವಿತರಿಸಬೇಕು. ಜಿಲ್ಲೆಯಲ್ಲಿರುವ 212 ಅಧಿಕೃತ ರಸಗೊಬ್ಬರ ಮಾರಾಟಗಾರರ ಏಜೆನ್ಸಿಗಳ ಸಭೆ ಕರೆದು ರೈತರಿಗೆ ತೊಂದರೆ ನೀಡದಂತೆ ಸೂಚಿಸಬೇಕು. ರೈತರಿಗೆ ತೊಂದರೆ ನೀಡುವ ರಸಗೊಬ್ಬರ ಏಜೆನ್ಸಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳಬೇಕು ಎಂದರು.

### ಬೆಳೆ ವಿಮೆ ಬಗ್ಗೆ ಜಾಗೃತಿ ಮೂಡಿಸಲು ಸೂಚನೆ

ರೈತರಿಗೆ ಬೆಳೆ ವಿಮೆ ಕುರಿತು ಸಂಪೂರ್ಣ ಮಾಹಿತಿ ನೀಡಲು ಜನವರಿ ಆರಂಭದಿಂದಲೇ ಸಾರ್ವಜನಿಕವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಸಾರ್ವಜನಿಕ ಕಚೇರಿಗಳು, ಹಾಲಿನ ಡೈರಿ, ಗ್ರಾಮ ಪಂಚಾಯಿತಿ, ಕಚೇರಿಗಳಲ್ಲಿ ಕೃಷಿ ಸಂಪರ್ಕ ಕೇಂದ್ರಗಳಲ್ಲಿ ರೈತರ ಬೆಳೆ ವಿಮೆ ಕುರಿತಂತೆ ಭಿತ್ತಿಪತ್ರ, ಬ್ಯಾನರ್‌ಗಳನ್ನು ಅಳವಡಿಸುವಂತೆ ಸಚಿವರು ಕೃಷಿ ಜಂಟಿ ನಿರ್ದೇಶಕರಿಗೆ ಸೂಚಿಸಿದರು.

ಬೆಳೆ ವಿಮೆ ಕಂಪನಿಗಳ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕಚೇರಿಗಳನ್ನು ತೆರಯಬೇಕು. ತಾಲ್ಲೂಕು ಕಚೇರಿಗಳಲ್ಲಿ ವಿಮಾ ಕಂಪನಿಗಳ ಕಚೇರಿ ತೆರೆಯಲು ಅವಕಾಶ ನೀಡಲಾಗುತ್ತದೆ. ತಾಲ್ಲೂಕು ಕಚೇರಿಗಳಿಗೆ ಭೇಟಿ ನೀಡುವ ರೈತರು ವಿಮಾ ಕಚೇರಿಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಾರೆ. ಬೆಳೆ ವಿಮೆ ನೋಂದಣಿ ಕುರಿತು ಕೃಷಿ ಇಲಾಖೆ ಹಾಗೂ ಲೀಡ್ ಬ್ಯಾಂಕ್ ಅಧಿಕಾರಿಗಳು ಪರಿಶೀಲಿಸಿ ವರದಿ ನೀಡಬೇಕು ಎಂದರು.

### ದೀರ್ಘಾವಧಿ ತಳಿ ಸದ್ಯಕ್ಕೆ ಬೇಡ

ಅಲ್ಪಾವಧಿ ರಾಗಿ ಬೆಳೆ ತಳಿಗಳಾದ (80 ದಿನಗಳು) ಜಿಪಿಯು-28 ಹಾಗೂ ಕೆಎಂಆರ್-316 ರಾಗಿ ತಳಿಗಳು ಬಿತ್ತನೆ ಬೀಜ ವಿತರಿಸರಬೇಕು. ದೀರ್ಘಾವಧಿ ರಾಗಿ ತಳಿಗಳನ್ನು ವಿತರಿಸಬಾರದು. ಅವಶ್ಯವಿರುವ ಅಲ್ಪಾವಧಿ ರಾಗಿ ತಳಿ ಬಿತ್ತನೆ ಬೀಜಗಳ ಕೊರತೆ ಬಾರದಂತೆ ಕ್ರಮ ವಹಿಸಿ ಎಂದು ಅವರು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸಲಹೆ ನೀಡಿದರು. ಪರ್ಯಾಯ ಬೆಳೆಗಳಾದ ಹುರುಳಿ, ಅಲಸಂದೆ, ಬೆಳಯುವಂತೆ ರೈತರಿಗೆ ತಿಳಿಸಬೇಕು ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕರಾದ ಎಸ್. ರವಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ ರಾಜು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಉಪಾಧ್ಯಕ್ಷ ಎಸ್. ಗಂಗಾಧರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಟರಾಜು ಗಾಣಕಲ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಜಿ.ಪಂ. ಉಪ ಕಾರ್ಯದರ್ಶಿ ಧನರಾಜ್, ಬನ್ನೇರುಘಟ್ಟ ಡಿಸಿಎಫ್ ಕಾಜೋಲ್ ಪಾಟೀಲ್, ಡಿಸಿಎಫ್ ರಾಮಕೃಷ್ಣಪ್ಪ ವೇದಿಕೆಯಲ್ಲಿದ್ದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಂಬಿಕಾ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

### ಕುಡಿಯುವ ನೀರಿಗೆ ತೊಂದರೆಯಾಗುವುದು ಬೇಡ

ಜಿಲ್ಲೆಯ 32 ಗ್ರಾಮ ಪಂಚಾಯಿತಿಗಳಲ್ಲಿನ 64 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು, 24 ಟ್ಯಾಂಕರ್‌ಗಳು ಹಾಗೂ 44 ಖಾಸಗಿ ಬೋರ್ ವೆಲ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದರು. ಜಲಜೀವನ್ ಮಿಷನ್ ಯೋಜನೆಯಡಿ ಕಾಮಗಾರಿಗಳನ್ನು 2027ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು. ಮಳೆ ಕೊರತೆಯಿಂದ ಕೃಷಿಯಲ್ಲಿ ಹಿನ್ನೆಡೆಯಾಗಲಿದೆ.ಮೇವಿನ ಕೊರತೆ ಕಂಡುಬರಲಿದೆ. ಕೃಷಿಯಲ್ಲಿ ಪರ್ಯಾಯವಾಗಿ ಮೇವು ಬೆಳೆಗಳನ್ನು ಬೆಳೆಯುವಂತೆ ರೈತರಲ್ಲಿ ಅರಿವು ಮೂಡಿಸಬೇಕು. ಜಾನುವಾರುಗಳ ಕುಡಿಯುವ ನೀರು ಮೇವು ಕೊರತೆಯಾಗದಂತೆ ಕ್ರಮವಹಿಸಬೇಕು ಎಂದು ಪಶು ಸಂಗೋಪನಾ ಇಲಾಖಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

### ಬರ ಪರಿಸ್ಥಿತಿಯ ಅಧ್ಯಯನ

ಜಿಲ್ಲೆಯಲ್ಲಿ ಬರ ಪರಿಸ್ಥಿತಿಯ ಅಧ್ಯಯನ ನಡೆಸಿದ ವೇಳೆ ಸಚಿವ ಬಾಲಕೃಷ್ಣ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿ, ಬರ ಪರಿಸ್ಥಿತಿಉ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾಗಡಿ ಹಾಗೂ ರಾಮನಗರ ತಾಲ್ಲೂಕಿನ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಪರಿಶೀಲನೆಯ ವೇಳೆ ಕಡಲೆಕಾಯಿ, ಅವರೆ, ತೊಗರಿಬೇಳೆ ಸೇರಿದಂತೆ ವಿವಿಧ ಬೆಳೆಗಳು ಹಾನಿಗೊಳಗಾಗಿರುವುದನ್ನು ಗಮನಿಸಿದ್ದೇನೆ. ಬೆಳೆ ಕೈಕೊಡುವ ಆತಂಕದಲ್ಲಿ ರೈತರು ಸಂಕಷ್ಟ ಎದುರಿಸುತ್ತದ್ದಾರೆ. ರೈತರ ಜಮೀನಿಗೆ ಭೇಟಿ ನೀಡಿ, ಬೆಳೆಗಳ ಸ್ಥಿತಿಗತಿ ಹಾಗೂ ಮಳೆಯ ಕೊರತೆಯಿಂದ ಎದುರಾಗಿರುವ ಸಮಸ್ಯೆಗಳನ್ನು ಖುದ್ದಾಗಿ ವೀಕ್ಷಿಸಿ ರೈತರಿಂದಲೇ ಅವರ ಸಂಕಷ್ಟಗಳು ಹಾಗೂ ಅಗತ್ಯತೆಗಳ ಕುರಿತು ಮಾಹಿತಿ ಪಡೆದುಕೊಳ್ಳಲಾಗಿದೆ, ಈ ಮಾಹಿತಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದರು.

### ಕಾಡು ಪ್ರಾಣಿಗಳ ಬಗ್ಗೆ ನಿಗಾ ಇರಲಿ

ಮಳೆ ಅಭಾವದಿಂದ ವನ್ಯ ಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ದಾಳಿ ಮಾಡುವ ಸಂಭವವಿರುತ್ತದೆ. ಮಾನವ-ಪ್ರಾಣಿ ಸಂಘರ್ಷದಿಂದ ಪ್ರಾಣ ಹಾನಿಯಾಗದಂತೆ ತಡೆಯಲು ಅರಣ್ಯ ಇಲಾಖೆ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು ಎಂದರು.

ಮುಖ್ಯಮಂತ್ರಿಗಳ ಜಿಲ್ಲೆಯಾಗಿರುವುದರಿಂದ ಅಧಿಕಾರಿಗಳು, ಸಿಬ್ಬಂದಿ ಸರ್ಕಾರಿ ಕೆಲಸ ದೇವರ ಕೆಲಸವೆಂದು ಭಾವಿಸಿ ಜವಾಬ್ದಾರಿ ಹಾಗೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು.

## ವಿಶ್ವ ಜಿನಿವಾ ದಿನಾಚರಣೆ

### ಯುದ್ಧದಲ್ಲ ಮಾನವೀಯತೆ ಕಾಪಾಡುವುದು ಅಗತ್ಯ



ಗುಂಡ್ಲುಪೇಟೆ: ಪಟ್ಟಣದ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಐಕ್ಯುಎಸಿ, ಎನ್‌ಎಸ್‌ಎಸ್ ಹಾಗೂ ಯೂತ್ ರೆಡ್ ಕ್ರಾಸ್ ಘಟಕಗಳ ವತಿಯಿಂದ ವಿಶ್ವ ಜಿನಿವಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಸವರಾಜು.ಎಂ. ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಂಜಪ್ಪ.ಎನ್. ಮಾತನಾಡಿ, 1859ರ ಜೂನ್ 24ರಂದು ನಡೆದ ಸ್ಯಾಲ್ಫರಿನೊ ಯುದ್ಧದ ಭೀಕರತೆಯನ್ನು ಕಂಡ ಸ್ವಿಸ್ ವ್ಯಾಪಾರಿ ಹೆನ್ರಿ ಡ್ಯೂನಾಂಟ್ ಅವರು ಯುದ್ಧದಲ್ಲಿ ಗಾಯಗೊಂಡ ಹಾಗೂ ತೊಂದರೆಗೊಳಗಾದ ಸೈನಿಕರಿಗೆ ನೆರವು ನೀಡುವ ಉದ್ದೇಶದಿಂದ ಅಂತರರಾಷ್ಟ್ರೀಯ ಮಾನವೀಯ ಸೇವಾ ಚಳವಳಿಗೆ ಬುನಾದಿ ಹಾಕಿದರು. ಬಳಿಕ 1864ರಲ್ಲಿ 12 ದೇಶಗಳೊಂದಿಗೆ ಒಪ್ಪಂದಕ್ಕೆ ಕಾರಣರಾದರು. ಈ ಹಿನ್ನೆಲೆಯಲ್ಲಿ ವಿಶ್ವ ಜಿನಿವಾ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಡಾ. ಮಹದೇವಮ್ಮ.ಪಿ. ವಹಿಸಿದ್ದರು. ಕಾರ್ಯಕ್ರಮಾಧಿಕಾರಿ ಮಲ್ಲುಸ್ವಾಮಿ. ಎನ್. ಗಂಜಾಂ, ಗುರುಪ್ರಸಾದ್ ಎನ್., ಡಾ. ರವಿಕುಮಾರ್, ಗಿರೀಶ್ ಕುಮಾರ್ ಡಿ.ಬಿ., ವಿವಿಧ ವಿಭಾಗಗಳ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಗಡಿ ಜಿಲ್ಲೆಯಲ್ಲಿ ರಂಗತರಂಗ ರಂಗಭೂಮಿಯನ್ನು ಜೀವಂತವಾಗಿರಿಸಿದೆ

ಚಾಮರಾಜನಗರ, ಗಡಿ ಭಾಗವಾದ ಚಾಮರಾಜನಗರ ಜಿಲ್ಲೆಯಲ್ಲಿ ರಂಗ ಚಟುವಟಿಕೆಗಳನ್ನು ನಿರಂತರವಾಗಿ ಜೀವಂತವಾಗಿಡುವಲ್ಲಿ ರಂಗತರಂಗ ಕಲಾವಿದರ ಪಾತ್ರ ಅನನ್ಯವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಎಸ್. ರಾಜು ಹೇಳಿದರು.

ನಗರದ ಡಾ. ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ರಂಗತರಂಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿರುವ ಎರಡು ದಿನಗಳ ರಂಗಾಯಣ ನಾಟಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು, ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಕಲಾವಿದರು ಮತ್ತು ಸಾಂಸ್ಕೃತಿಕ ಸಂಘಟನೆಗಳ ಮೇಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾವಿದರಿಗೆ ಹಲವು ಸೌಲಭ್ಯಗಳು ಲಭ್ಯವಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಂಗತರಂಗ ಟ್ರಸ್ಟ್ ಅಧ್ಯಕ್ಷ ಸೋಮಶೇಖರ ಬಿಸಲ್ವಾಡಿ ಮಾತನಾಡಿ, ರಂಗತರಂಗ ಸಾಂಸ್ಕೃತಿಕ ಸಂಘಟನೆಯು ಕಳೆದ 34 ವರ್ಷಗಳಿಂದ ರಾಜ್ಯದಾದ್ಯಂತ ಹಲವು ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಜನಮನ್ನಣೆ ಗಳಿಸಿದೆ. ಈವರೆಗೆ ಏಳು ನಾಟಕೋತ್ಸವಗಳನ್ನು ಆಯೋಜಿಸಿ, ಅನೇಕ ಕಲಾವಿದರಿಗೆ ವೇದಿಕೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದರಾದ ಸಿ. ಪುಷ್ಪ ಸೋಮಸುಂದರ್, ಸುರೇಶ್ ನಾಡಿಗ್ ಹರದನಹಳ್ಳಿ, ಆರ್. ಮೂರ್ತಿ ಹಾಗೂ ಎಂ. ಶಿವರಾಮು ಅವರನ್ನು ರಂಗಗೌರವ ನೀಡಿ ಸನ್ಮಾನಿಸಲಾಯಿತು. ನಂತರ ಸತೀಶ್ ತಿಪಟೂರು ರಚನೆಯ 'ಮೈ ಫ್ಯಾಮಿಲಿ' ನಾಟಕವನ್ನು ರಂಗಾಯಣದ ಕಲಾವಿದರು ಪ್ರದರ್ಶಿಸಿದರು. ನಾಟಕೋತ್ಸವಕ್ಕೆ ರಂಗಾಸಕ್ತರು ಹಾಗೂ ಸಾರ್ವಜನಿಕರು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು




## ಕಸಾಪ ಅಭ್ಯರ್ಥಿ ಸ್ಥಾನಕ್ಕೆ ಘೋಷಣೆ

ಮೈಸೂರು: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದ ಅವಧಿ ನವೆಂಬರ್‌ನಲ್ಲಿ ಮುಗಿಯಲಿದ್ದು, ನಂತರ ನಡೆಯಲಿರುವ ಚುನಾವಣೆಯಲ್ಲಿ ಹಿರಿಯ ಪತ್ರಕರ್ತ ಹಾಗೂ ಹೋರಾಟಗಾರರಾದ ಜಾಣಗೆರೆ ವೆಂಕಟರಾಮಯ್ಯರನ್ನು ಸರ್ವಾನುಮತದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದಾಗಿ ಪ್ರಮುಖ ಚಿಂತಕ ಹಾಗೂ ಪ್ರಗತಿಪ ರರು ನಗರದ ಪತ್ರಕರ್ತರ ಭವನದಲ್ಲಿ ಪ್ರಕಟಿಸಿದರು.

ಮೊದಲಿಗೆ ಪ್ರಗತಿಪರ ಚಿಂತಕ ಪ್ರೊ.ಕೆ. ಎಸ್.ಭಗ ನಾವ್ ಮಾತನಾಡಿ, ಸಾಹಿತ್ಯ ಪರಿಷತ್ ಅಧ್ಯಕ್ಷರಾಗಲು ಅರ್ಹತೆ, ಪ್ರಾಮಾಣಿಕತೆ, ಕನ್ನಡಪರ ಕೆಲಸ ಮಾಡುವವ ರಾಗಿರಬೇಕು. ಆದರೆ ಕಳೆದ ಅವಧಿಗಳಲ್ಲಿ ಪರಿಷತ್ತನ್ನು ಅಧೋಗತಿಗೆ ಇಳಿಸಿದ್ದಾರೆ. ಆದರೆ, ಇವುಗಳಿಂದ ಹೊರ ತಾದ ಜಾಣಗೆರೆ ವೆಂಕಟರಾಮಯ್ಯ ಅವರು ಪ್ರಾಮಾ ಣಿಕರು, ಸತ್ಯನಿಷ್ಠರು ಹಾಗೂ ಕನ್ನಡ ಕ್ಕಾಗಿ ಹೋರಾಡುವವರಾಗಿರುವವರಾಗಿರುವ ಕಾರಣ ಇವರನ್ನೇ ಆಯ್ಕೆ ಮಾಡಬೇಕೆಂದು ಜಿಲ್ಲೆಯ ಸಾಹಿತ್ಯ ಪ್ರಿಯರು ಹಾಗೂ ಪರಿಷತ್‌ನ ಸದಸ್ಯರು ಅವರನ್ನೇ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಚಲನಚಿತ್ರ ನಿರ್ದೇಶಕ ನಂಜುಂ ಡೇಗೌಡ ಮಾತನಾಡಿ, ಕಳೆದ



2-3 ಅವಧಿಯಲ್ಲಿ ಪರಿಷತ್ತನ್ನು ಅಧೋಗತಿಗಿಳಿಸಿದ್ದಾರೆ. ಇದರಿಂದಾಗಿ ಪರಿಷತ್ ಸಾಹಿತ್ಯ ಚಟುವಟಿಕೆಯಿಂದ ದೂರಾಗಿದೆ. ಆದ್ದರಿಂದ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಬೆಂಬಲಿಸುವುದಾಗಿ ತಿಳಿಸಿದರು.

ಅಭ್ಯರ್ಥಿ ಜಾಣಗೆರೆ ವೆಂಕಟರಾಮಯ್ಯ ಮಾತನಾಡಿ, 6 ಕೋಟಿ ಕನ್ನಡಿಗರ ಪ್ರಾತಿನಿಧಿಕ ಜೀವನಾಡಿ ಪರಿಷತ್ ಆಗಿದೆ. ನಾಲ್ವಡಿ ಅವರ ಕೊಡುಗೆಯಾದ ಪರಿಷತ್ತನ್ನು ಸಮರ್ಪವಾಗಿ ನಿಭಾಯಿಸುವ ಬದಲು ಹಾಳು ಮಾಡಿದ್ದಾರೆ. ಈ ಹಿಂದಿನ ಅಧ್ಯಕ್ಷರ ವಿರುದ್ಧ ತಾವು ಮಾಡಿದ 17 ಆರೋಪಗಳಲ್ಲಿ 16 ಆರೋಪ ತನಿಖೆ ವೇಳೆ ಸಾಬೀತಾಗಿವೆ. ಹೀಗಾಗಿ ಪರಿಷತ್ ಮುನ್ನ ಡೆಸಲು ತಮ್ಮನ್ನು ಅಭ್ಯರ್ಥಿಯನ್ನಾಗಿ ಪ್ರಗತಿಪರರು, ಸಾಹಿತಿಗಳು ಮೊದಲಾದವರು ಆಯ್ಕೆ ಮಾಡಿದ್ದು, ಮತದಾರರು ಬೆಂಬಲ ನೀಡಬೇಕೆಂದು ಕೋರಿದರು. ಆರ್.ಜಿ.ಹಳ್ಳಿ ನಾಗರಾಜ್, ಕೆ. ಎಸ್.ಶಿವರಾಮು ಇನ್ನಿತರರು ಇದ್ದರು.

## ಎಪಿಎಂಸಿ ಅಧ್ಯಕ್ಷರ ಅಧಿಕಾರಿ ಸ್ವೀಕಾರ



ಗುಂಡ್ಲುಪೇಟೆ: ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಅಧ್ಯಕ್ಷ ಸ್ಥಾನಕ್ಕೆ ಮಂಚಹಳ್ಳಿ ವಿರೂಪಾಕ್ಷ ಅವರು ಅಧಿಕಾರ ಸ್ವೀಕರಿಸಿದರು.

ಈ ಹಿಂದೆ ಅಧ್ಯಕ್ಷರಾಗಿದ್ದ ನಾಗರಾಜು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ, ಉಳಿದ ಹತ್ತೂವರೆ ತಿಂಗಳ ಅವಧಿಗೆ ಶಾಸಕ ಎಚ್.ಎಂ. ಗಣೇಶ ಪ್ರಸಾದ್ ಅವರ ಸೂಚನೆಯ ಮೇರೆಗೆ ಮುಖಂಡ ಮಂಚಹಳ್ಳಿ ಲೋಕೇಶ್ ಅವರ ಸಹೋದರ ವಿರೂಪಾಕ್ಷ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದ್ದು, ಅವರು ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಜಿ.ಪಂ. ಉಪಾಧ್ಯಕ್ಷ ಕೆ.ಎಸ್. ಮಹೇಶ್, ಮಾಜಿ ಎಪಿಎಂಸಿ ಅಧ್ಯಕ್ಷರಾದ ಶಿವನಾಗಪ್ಪ, ಬಸವರಾಜು, ನಾಗರಾಜು, ನಿರ್ದೇಶಕರಾದ ಮಹದೇವಪ್ಪ ತೆರಕಣಾಂಬಿ, ಬಸವರಾಜಪ್ಪ, ನಾಗರಾಜಪ್ಪ, ಮುಖಂಡರಾದ ಬಸವಣ್ಣ ಕೊಡಸೋಗೆ, ರಾಜೇಶ್ ಬೇರಂಬಾಡಿ, ಮಣಿ ಮಡಹಳ್ಳಿ, ಸಾಹುಲ್, ಮಂಚಹಳ್ಳಿ ಗ್ರಾಮದ ಮಹೇಶ್, ಮಲ್ಲಪ್ಪ, ನಂದೀಶ್, ಹರೀಶ್ ಹಾಗೂ ಎಪಿಎಂಸಿ ಕಾರ್ಯದರ್ಶಿ ಶ್ರೀಧರ್ ಸೇರಿದಂತೆ ಇನ್ನೂ ಇತರರು ಉಪಸ್ಥಿತರಿದ್ದರು.

## ಅದ್ದೂರಿ ಭೀಮನ ಅಮಾವಾಸ್ಯೆ ಆಚರಣೆ



ಗುಂಡ್ಲುಪೇಟೆ: ಭೀಮನ ಅಮಾವಾಸ್ಯೆ ಅಂಗವಾಗಿ ತಾಲ್ಲೂಕಿನ ವಿವಿಧ ಮಹದೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಿತು.

ಹಸಗೂಲಿ ನಡುಬೆಟ್ಟ, ಕೋಡಹಳ್ಳಿ, ತವರಗಟ್ಟೆ, ಮಳವಳ್ಳಿ, ಇಂಗಲವಾಡಿ, ಅರೇಪುರ ಸೇರಿದಂತೆ ವಿವಿಧ ದೇವಾಲಯಗಳಿಗೆ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪೂಜೆ



ಸಲ್ಲಿಸಿದರು. ಬಳಿಕ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಭೀಮನ ಅಮಾವಾಸ್ಯೆ ಪ್ರಯುಕ್ತ ಮಹಿಳೆಯರು ಸಂಪ್ರದಾಯದಂತೆ ಪತಿಯ ಪಾದ ಪೂಜೆ ನೆರವೇರಿಸಿ, ಪತಿಯ ಆರೋಗ್ಯ ಹಾಗೂ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸಿದರು. ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ಭಕ್ತರ ಸಂಚಾರ ಹೆಚ್ಚಾಗಿದ್ದು, ಹಬ್ಬದ ಸಂಭ್ರಮ ಕಳೆಗಟ್ಟಿತ್ತು.

## ರಸ್ತೆ ತಡೆ ಹೋರಾಟಕ್ಕೆ ಬೆಂಬಲ



ಚಾಮರಾಜನಗರ, ಮಾಲಗೆರೆಗೆ 2ನೇ ಹಂತದ ನೀರು ತುಂಬಿಸುವ ಯೋಜನೆಯ ಬಗ್ಗೆ ಮರಿಯಾಲ ಗ್ರಾಮದ ಬಳಿ ಸಾರ್ವಜನಿಕರು ಹಾಗೂ ರೈತ ಸಂಘದವರು ಹಮ್ಮಿಕೊಂಡಿದ್ದ ರಸ್ತೆ ತಡೆ ಹೋರಾಟಕ್ಕೆ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ವತಿಯಿಂದ ಬೆಂಬಲ ನೀಡಲಾಯಿತು

ಸದರಿ ಹೋರಾಟಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ಒಂದು ವಾರದ ತನಕ ಸಮಯವಕಾಶ ಕೇಳಿದ್ದು ನೀರು ಬಿಡಿಸಲು ಭರವಸೆ ನೀಡಿರುತ್ತಾರೆ ಈ ಸಂದರ್ಭದಲ್ಲಿ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿಯ ಅಧ್ಯಕ್ಷರಾದ ಕೆ ವೀರಭದ್ರ ಸ್ವಾಮಿಯವರು ಒಂದು ಒಂದು ವಾರದ ಒಳಗೆ ಜಿಲ್ಲಾಧಿಕಾರಿಗಳು ನೀರು ಬಿಡಿಸಲು ಯಾವುದೇ ಕ್ರಮ ವಹಿಸದಿದ್ದಲ್ಲಿ ಮತ್ತೆ ಮರೆಯಾಲದ ಬಳಿ ಉಗ್ರವಾದ ಹೋರಾಟವನ್ನು ಮಾಡುವುದಾಗಿ ಎಚ್ಚರಿಕೆ ನೀಡಿದರು ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಮಲ್ಲೇಶ್ ಚಂದ್ರು ವೀರಭದ್ರ , ಮರಿಯಾದ ಶಿವು ಕಾನೂನು ಸಲಹೆಗಾರರಾದ ಜಿ ಮಹದೇವಸ್ವಾಮಿ ಮತ್ತಿತರರು ಹಾಜರಿದ್ದರು.

### ವಿಶೇಷ ಹುಲಿ ಸಂರಕ್ಷಣಾ ದಳ, ಬಂಡೀಪುರ-ನಾಗರಹೊಳೆ ಹಾಗೂ ಜಿ.ಎಸ್.ಬೆಟ್ಟ ವಲಯದ ಅರಣ್ಯ ಸಿಬ್ಬಂದಿ ಜಂಟಿ ಕಾರ್ಯಾಚರಣೆ

## ಹುಲಿ ಹಲ್ಲು, ಉಗುರು ಮಾರಾಟಕ್ಕೆ ಯತ್ನ: ಮೂವರ ಬಂಧನ

ಗುಂಡ್ಲುಪೇಟೆ: ಹುಲಿ ಹಲ್ಲುಗಳು ಹಾಗೂ ಉಗುರನ್ನು ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿ, ವನ್ಯಜೀವಿ ಅಂಗಾಂಗಗಳು ಹಾಗೂ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ-948ರ ಹರದನಹಳ್ಳಿ ಗ್ರಾಮದ ಕೆರೆ ಸಮೀಪ ಆ.11ರಂದು ದೊರೆತ ಖಚಿತ ಮಾಹಿತಿ ಆಧರಿಸಿ ವಿಶೇಷ ಹುಲಿ ಸಂರಕ್ಷಣಾ ದಳ, ಬಂಡೀಪುರ-ನಾಗರಹೊಳೆ ಹಾಗೂ





ಜಿ.ಎಸ್.ಬೆಟ್ಟ ವಲಯದ ಅರಣ್ಯ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿದರು.

ಬಂಧಿತರನ್ನು ಹೊಸಪೋಡು ಗ್ರಾಮದ ಮಹದೇವ, ಮಾವತ್ತೂರು ಗ್ರಾಮದ ರಮೇಶ ಹಾಗೂ ವಡೆಯರಪಾಳ್ಯ ಗ್ರಾಮದ ಮಣಿ ಎಂದು ಗುರುತಿಸಲಾಗಿದೆ. ಆರೋಪಿಗಳಿಂದ ಹುಲಿಯ ನಾಲ್ಕು ಕೋರೆ ಹಲ್ಲುಗಳು, ಎರಡು ದವಡೆ ಹಲ್ಲುಗಳು ಹಾಗೂ ಒಂದು ಹುಲಿ ಉಗುರು ಸೇರಿದಂತೆ ವನ್ಯಜೀವಿ ಅಂಗಾಂಗಗಳ ಸಾಗಣೆಗೆ ಬಳಸುತ್ತಿದ್ದ ಆಟೋವನ್ನು ವಶಪಡಿಸಿಕೊಳ್ಳಲಾಗಿದೆ.

ವಿಚಾರಣೆ ವೇಳೆ ವನ್ಯಜೀವಿ ಅಂಗಾಂಗಗಳನ್ನು ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡಲು ಯತ್ನಿಸುತ್ತಿದ್ದಾಗಿ ಆರೋಪಿಗಳು ತಿಳಿಸಿದ್ದಾರೆ ಎಂದು ಅರಣ್ಯ ಇಲಾಖೆ ತಿಳಿಸಿದೆ. ಈ ಸಂಬಂಧ ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರಡಿ ಪ್ರಕರಣ ದಾಖಲಿಸಿ, ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಶುಭಂ ಸಿಂಗ್ ತನ್ವರ್ ಅವರ ನಿರ್ದೇಶನದ ಮೇರೆಗೆ ವಿಶೇಷ ಹುಲಿ ಸಂರಕ್ಷಣಾ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಎಂ., ಜಿ.ಎಸ್.ಬೆಟ್ಟ ವಲಯದ ವಲಯ ಅರಣ್ಯಾಧಿಕಾರಿ ಕೆ.ಪಿ.ಸತೀಶ್ ಕುಮಾರ್, ವಿಶೇಷ ಹುಲಿ ಸಂರಕ್ಷಣಾ ದಳದ ವಲಯ ಅರಣ್ಯಾಧಿಕಾರಿ ವೆಂಕಟೇಶ್, ಉಪ ವಲಯ ಅರಣ್ಯಾಧಿಕಾರಿಗಳಾದ ಜ್ಞಾನಶೇಖರ ಎಂ., ಕಾರ್ತಿಕ್ ಯಾದವ್, ಶ್ರೀಕಾಂತ್ ಹಾಗೂ ಜಿ.ಎಸ್.ಬೆಟ್ಟ ವಲಯದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಜ್ಞಾನ ಹೆಚ್ಚಳಕ್ಕೆ ಗ್ರಂಥಾಲಯ ಸದುಪಯೋಗವಾಗಲಿ



ಮೈಸೂರು: ಪ್ರತಿಯೊಬ್ಬರೂ ಗ್ರಂಥಾಲಯವನ್ನು ಸದುಪಯೋಗ ಮಾಡಿಕೊಂಡು ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದು ಮಾನಸ ಗಂಗೋತ್ರಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಎಂ.ಚಂದ್ರಶೇಖರ್ ಕರೆ ನೀಡಿದರು.

ಗ್ರಂಥಾಲಯ ಪಿತಾಮಹ ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್ ಅವರ ಜನ್ಮ ದಿನವಾದ ಆ. 12 ನ್ನು ರಾಜ್ಯ ಸರ್ಕಾರ ಗ್ರಂಥಪಾಲಕರ ದಿನಾಚರಣೆ" ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ನಗರ ಕೇಂದ್ರ ಗ್ರಂಥಾಲಯದ ವತಿಯಿಂದ ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮ ಹಾಗೂ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ದೇವಸ್ಥಾನದ ಗುಡಿಗಳಲ್ಲಿ ಭಕ್ತರು ತುಂಬಿ ತುಳುಕುವಂತೆ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳು ತುಳುಕಬೇಕು. ಒಂದು ಪುಸ್ತಕ ನೂರು ಗೆಳೆಯರಿಗೆ ಸಮಾನ, ಒಬ್ಬ ಉತ್ತಮ ಸ್ನೇಹಿತ ಒಂದು ಗ್ರಂಥಾಲಯಕ್ಕೆ ಸಮಾನ ಎಂಬುದು ಗ್ರಂಥಾಲಯದ ಪಿತಾಮಹ ಎಸ್.ಆರ್. ರಂಗನಾಥನ್ ಅವರ ನಂಬಿಕೆಯಾಗಿತ್ತು ಎಂದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಹೆಚ್ಚು ಸಮಯವನ್ನು ಗ್ರಂಥಾಲಯದಲ್ಲಿ ಕಳೆಯುವುದರಿಂದ ಜ್ಞಾನಾರ್ಜನೆಯ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸ್ ಮಾಡಲು ಅನುಕೂಲವಾಗುತ್ತದೆ. ಎಂದು ಸಲಹೆ ಮಾಡಿದರು.

ಶಾರದಾವಿಲಾಸ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾ ಪಕ, ಪೀಪಲ್ಸ್ ಪಾರ್ಕ್ ಶಾಖಾ ಗ್ರಂಥಾಲಯ ಸಮಿತಿ ಸದಸ್ಯ ಜಿ.ಆನಂದ್, ರಾಖಿ ಚೆನ್ನಬಸವಣ್ಣ, ಅಧ್ಯಕ್ಷತೆವಹಿಸಿದ್ದ ಪೀಪಲ್ಸ್ ಪಾರ್ಕ್ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲ ಡಾ.ಬಿ.ಮಲ್ಲಿಕಾರ್ಜುನ ಸ್ವಾಮಿ, ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕ ಬಿ.ಮಂಜುನಾಥ್ ಮಾತನಾಡಿದರು. ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ಸುಮಾ ಬಿ.ಕೋಡಿಹಳ್ಳಿ, ಮುಖ್ಯ ಗ್ರಂಥಾಲಯಾಧಿಕಾರಿ ಟಿ.ಪದ್ಮಶ್ರೀ ವೇದಿಕೆಯಲ್ಲಿದ್ದರು. ಗ್ರಂಥಪಾಲಕರ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ವಿಜೇತರ ಪಟ್ಟಿಯನ್ನು ಗ್ರಂಥಾಲಯ ಸಹಾಯಕಿ ಎಂ.ಎಸ್. ಚಿತ್ರಾ ಓದಿದರು. ಗ್ರಂಥಾಲಯ ಸಹಾಯಕ ಎಚ್.ವಿ.ರಮೇಶ್ ಸ್ವಾಗತಿಸಿದರು. ಗ್ರಂಥಪಾಲಕ ಪಿ. ಯತಿರಾಜು ವಂದಿಸಿದರು. ಗ್ರಂಥಾಲಯ ಸಹಾಯಕಿ ಎಂ.ಕುಸುಮಾ ಕಾರ್ಯಕ್ರಮ ನಿರೂಪಿಸಿದರು. ಕುಮಾರ ಮತ್ತು ತಂಡದವರು ನಾಡಗೀತೆ ಹಾಡಿದರು. ಪೀಪಲ್ಸ್ ಪಾರ್ಕ್ ಗ್ರಂಥಾಲಯದ ಸಹಾಯಕ ಗ್ರಂಥಪಾಲಕಿ ಎಸ್.ಸೌಮ್ಯಾ, ನಗರ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಸೈಯದ ನೂರುಸ್ಸಭಾ ಸಾಲಾರ್, ಕಚೇರಿಯ ಅಧೀಕ್ಷಕಿ ಎಚ್.ಲತಾ, ಪ್ರಥಮ ದರ್ಜೆ ಸಹಾಯಕಿ ಎಲ್.ಶೋಭಾ ಇತರರು ಉಪಸ್ಥಿತರಿದ್ದರು.

# ಶ್ರೀಮಂಟೇಸ್ವಾಮಿಗೆ ವಿಶೇಷ ಪೂಜೆ



ಚಾಮರಾಜನಗರ, ಭೀಮನ ಅಮಾವಾಸ್ಯೆ ಪ್ರಯುಕ್ತ ತಾಲೂಕಿನ ಕೂಡ್ಲೂರು ಶ್ರೀಮಂಟೇಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅನ್ನಸಂತರ್ಪಣೆ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ ನಡೆಯಿತು. ನಂತರ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಜಿಲ್ಲಾದ್ಯಂತ ಆಗಮಿಸಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪ್ರಸಾದ ಸೇವಿಸಿ ದೇವರಕೃಪೆಗೆ ಪಾತ್ರರಾದರು.

ದೇವಸ್ಥಾನದ ಅರ್ಚಕ ಸತ್ಯಪ್ಪ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ಭೀಮನ ಅಮಾವಾಸ್ಯೆ ಪ್ರಯುಕ್ತ ದೇವಸ್ಥಾನದಲ್ಲಿ ವಿಶೇಷಪೂಜೆ ಹಮ್ಮಿಕೊಂಡು ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಷಾಢಮಾಸದ ಅಮಾವಾಸ್ಯೆಯಾದ ಭೀಮನ ಅಮಾವಾಸ್ಯೆಯು ಮಹಿಳೆಯರಿಗೆ ವಿಶೇಷವಾದ ದಿನವಾಗಿದೆ. ಈ ದಿನ ವಿವಾಹಿತ ಮಹಿಳೆಯರು ಪತಿ ಪೂಜೆ ಮಾಡಿದರೆ, ಅವಿವಾಹಿತ ಮಹಿಳೆಯರು ಉತ್ತಮ ಪತಿಯನ್ನು ಪಡೆಯಲು, ಸಹೋದರ ಆಯಸ್ಸಿಗಾಗಿ ವ್ರತವನ್ನು ಮಾಡುತ್ತಾರೆ ಎಂದರು.

ಭೀಮನ ಅಮಾವಾಸ್ಯೆ ಶುಭಾಶಯಗಳು, ಉತ್ತಮ ಮಳೆ, ಬೆಳೆಯಾಗಲಿ ಸರ್ವರಿಗೂ ಸನ್ಮಂಗಳ ಉಂಟು ಮಾಡಲಿ ಎಂದು ಆಶಿಸಿದರು.

# ಬಂದ್ ಬದಲು ಹೋರಾಟ

## ರೈತ ಸಂಘ, ಕನ್ನಡಪರ ಸಂಘಟನೆಗಳಿಂದ ವಿನೂತನ ಪ್ರತಿಭಟನೆ



ಮೈಸೂರು: ತಮಿಳುನಾಡಿಗೆ ನೀರು ಹರಿಸುವಂತೆ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಆದೇಶಿಸಿರುವುದನ್ನು ಖಂಡಿಸಿ ಕನ್ನಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಕರೆ ನೀಡಿರುವ ಬಂದ್ ಬೆಂಬಲಿಸದಿರಲು ಬಹುತೇಕ ಸಂಘಟನೆಗಳು ಸ್ಪಷ್ಟಪಡಿಸಿವೆ. ಆದರೆ, ಎಂದಿನಂತೆ ತಮ್ಮ ಹೋರಾಟ ಮುಂದುವರೆಸುವುದಾಗಿ ಸಂಘಟನೆಗಳು ತಿಳಿಸಿವೆ.

ಬಂದ್ ಮಾಡದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿರುವ ಹಿನ್ನೆಲೆ ಹಾಗೂ ಪೂರ್ವ ತಯಾರಿ ನಡೆಸದ ಹಿನ್ನೆಲೆಯಲ್ಲಿ ಬಂದ್ ಮಾಡದಿರಲು ವಿವಿಧ ಸಂಘಟನೆಗಳು ತಿಳಿಸಿವೆ. ಅಖಂಡ ಕರ್ನಾಟಕ ಬಂದ್‌ಗೆ ಮಿಶ್ರ ಬೆಂಬಲ ವ್ಯಕ್ತವಾಗಿದೆ. ಕೆಲವು ಪ್ರಮುಖ ಸಂಘಟನೆಗಳು ಈ ಬಂದ್‌ಗೆ ನೇರ ಬೆಂಬಲ ಸೂಚಿಸಿದರೆ, ಇನ್ನೂ ಕೆಲ ಸಂಘಟನೆಗಳು ಕೇವಲ ನೈತಿಕ ಬೆಂಬಲ ಸೂಚಿಸಿವೆ. ಈ ಹಿನ್ನೆಲೆಯಲ್ಲಿ ನಗರದಲ್ಲಿ ಆಸ್ಪತ್ರೆ ಮತ್ತು ಮೆಡಿಕಲ್‌ಗಳು, ಸರ್ಕಾರಿ ಹಾಗೂ ಖಾಸಗಿ ಶಾಲೆ-ಕಾಲೇಜು, ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್, ಆಟೋ, ಅಂಗಡಿಗಳು, ಹೋಟೆಲ್‌ಗಳು, ಬಟ್ಟೆ ಅಂಗಡಿ, ಸರ್ಕಾರಿ ಕಚೇರಿ, ಸ್ಥಳೀಯ ಆಡಳಿತ ಕಚೇರಿ, ಕೈಗಾರಿಕೆ, ಬೀದಿ ಬದಿ ಅಂಗಡಿಗಳ ಸೇವೆ ಎಂದಿನಂತೆ ಇರಲಿದೆ.

### ಮೌನ ಪ್ರತಿಭಟನೆ

ಬಂದ್ ಸಂಬಂಧ ನಗರದ ರಾಜಕುಮಾರ್ ಉದ್ಯಾನವನದಲ್ಲಿ ಕನ್ನಡಪರ ಸಂಘಟನೆ, ವಿದ್ಯಾರ್ಥಿ ಒಕ್ಕೂಟ, ಸಂಘ-ಸಂಸ್ಥೆಗಳ ಪೂರ್ವಭಾವಿ ಸಭೆ ನಡೆಸಿ ಕೈಕಟ್ಟಿ, ಬಾಯಿ ಮುಚ್ಚಿ ಮೌನವಹಿಸಿ ಒಂದು ಗಂಟೆಗಳ ಕಾಲ ಆರ್.ಗೇಟ್ ವೃತ್ತದಲ್ಲಿ ಸಾಂಕೇತಿಕವಾಗಿ ನಿದ್ರಾ ವ್ಯವಸ್ಥೆಗೆ ಜಾರುವ ಮೂಲಕ ವಿನೂತನ ಪ್ರತಿಭಟನೆ ಮಾಡಲು ನಿಶ್ಚಯಿಸಲಾಯಿತು. ಈ ಕುರಿತು ಪ್ರತಿಕ್ರಯಿಸಿದ ಸಭೆಯ ಅಧ್ಯಕ್ಷತೆವಹಿಸಿದ್ದ ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್‌ಗೌಡ ಮಾತನಾಡಿ, ನಾಳಿನ ಬಂದ್‌ಗೆ ಪರೋಕ್ಷ ಬೆಂಬಲ ವ್ಯಕ್ತಪಡಿಸಲು ನಿರ್ಧರಿಸಲಾಗಿದೆ. ನಾಡಿನ ನೆಲ, ಜಲದ ರಕ್ಷಣೆಯನ್ನು ರಾಜ್ಯ ಸರ್ಕಾರವೇ ತೆಗೆದುಕೊಳ್ಳುತ್ತೇವೆ ಎಂಬ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ನಾಳಿನ ಬಂದ್ ನಲ್ಲಿ ಕೈಕಟ್ಟಿ, ಬಾಯಿ ಮುಚ್ಚಿ ಮೌನವಹಿಸಿ ಒಂದು ಗಂಟೆಗಳ ಕಾಲ ಜಯಚಾಮರಾಜೇಂದ್ರ ಒಡೆಯರ(ಆರ್.ಗೇಟ್) ವೃತ್ತದಲ್ಲಿ ಸಾಂಕೇತಿಕವಾಗಿ ನಿದ್ರಾ ವ್ಯವಸ್ಥೆಗೆ ಜಾರುವ ಮೂಲಕ ವಿನೂತನ ಪ್ರತಿಭಟನೆ ಮಾಡಿ ರಾಜ್ಯ ಸರ್ಕಾರದ ಕಾರ್ಯ ಚಟುವಟಿಕೆಗಳನ್ನ ಗಮನಿಸುವ ಮುಖೇನ ತಮ್ಮ ಆಕ್ರೋಶವನ್ನು ಹೊರಹಾಕುವ ನಿರ್ಣಯವನ್ನು ಕೈಗೊಂಡಿರುವುದಾಗಿ ಹೇಳಿದರು. ಸಭೆಯಲ್ಲಿ ಟಿ.ರವಿಗೌಡ, ಮಹದೇವಸ್ವಾಮಿ, ಮಂಡಕಳ್ಳಿ ಚಾಮರಾಜು, ಬೋಗಾದಿ ಸಿದ್ದೇಗೌಡ, ಟಿ. ರವೀಂದ್ರ, ಗೋವಿಂದರಾಜು, ನಾಲಾಬೀದಿ ರವಿ, ವಕೀಲ ಡಿ.ಆರ್.ಕರಿಗೌಡ, ಅರುಣ್ ಕುಮಾರ್, ಬಿ.ಮಹದೇವ, ಮೂಗೂರು ನಂಜುಂಡಸ್ವಾಮಿ, ಎಸ್.ಸಿದ್ದಪ್ಪ, ಬಸವರಾಜು, ಜೆ.ಉಮೇಶ, ಕೆ.ಜಿ.ಕೊಪ್ಪಲ್ ಶಂಕರ್, ಮಿಲ್ಕ್ ಮಂಜು, ಸಂಜಯ್, ಮದನ್, ಮಹೇಶ್ ಕುಮಾರ್, ತೇಜಸ್ವಿ, ವಿಷ್ಣು, ಡಿಪಿಕೆ ಪರಮೇಶ್, ಎಂ.ಹರೀಶ್, ರಾಜಶೇಖರ್, ಎಸ್.ನಾಗೇಶ್ ಯಾದವ್, ಜೆ.ಮಂಜುನಾಥ್, ಮೈನಾ ಲೋಕೇಶ್, ಪಾಲಹಳ್ಳಿ ರಾಮಕೃಷ್ಣ, ಎಸ್.ಬಾಲಕೃಷ್ಣ, ಎಂ ರಮೇಶ, ಕೆ.ಮುಕುಂದ್, ಜಿ.ಪ್ರಕಾಶ್, ಎಂ.ವಿ.ಶ್ರೀನಿವಾಸಮಿತ್ರ, ಮಂಜುನಾಥ, ದ್ಯಾವಪ್ಪ ನಾಯಕ, ಆರ್.ಶ್ರೀನಿವಾಸ್, ಪ್ಯಾಲೇಸ್ ಬಾಬು, ಎಸ್.ವಿ.ಶಿವನಾಯಕ ಇನ್ನಿತರರು ಭಾಗವಹಿಸಿದ್ದರು.

> "ಕಾವೇರಿ ವಿವಾದ ವಿಚಾರದಲ್ಲಿ ಕನ್ನಡ ಪರ ಸಂಘಟನೆಗಳ ಹೋರಾಟಕ್ಕೆ ನಮ್ಮ ಬೆಂಬಲ ಮೊದಲಿನಿಂದಲೂ ಇದೆ. ಬಂದ್ ಮಾಡುವುದರಿಂದ ನಮಗೆ ನಷ್ಟವಾಗಲಿದ್ದು, ಜತೆಗೆ ನಾವು ಕಾವೇರಿ ಹೋರಾಟಕ್ಕೆ ನೈತಿಕ ಬೆಂಬಲ ಸೂಚಿಸುತ್ತೇವೆ. ಸದ್ಯದ ಪರಿಸ್ಥಿತಿಯಲ್ಲಿ ಸೌಹಾರ್ದಯುತವಾಗಿ ಕಾವೇರಿ ಬಿಕ್ಕಟ್ಟಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಕೆಲಸ ಮಾಡಬೇಕಿದೆ.
>
> -**ನಾರಾಯಣಗೌಡ** ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ

# ಸಹಕಾರದಿಂದ ಸಂಘರ್ಷ ತಡೆ

## ಶಾಸಕ ಎಚ್.ಎಂ.ಗಣೇಶಪ್ರಸಾದ್ ಹೇಳಿಕೆ | 'ವಿಶ್ವ ಆನೆ ದಿನಾಚರಣೆ



ಗುಂಡ್ಲುಪೇಟೆ: ಮಾನವ ಹಾಗೂ ಆನೆಗಳ ನಡುವಿನ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಅರಣ್ಯ ಇಲಾಖೆ ಹಾಗೂ ಸಾರ್ವಜನಿಕರ ಪರಸ್ಪರ ಸಹಕಾರ ಅತ್ಯಗತ್ಯ. ಆನೆಗಳ ಸ್ವಭಾವವನ್ನು ಅರಿತು ಅವುಗಳಿಗೆ ಯಾವುದೇ ಹಾನಿ ಮಾಡದೆ ಸಹಬಾಳ್ವೆ ನಡೆಸುವ ಮನೋಭಾವವನ್ನು ಸಮಾಜದಲ್ಲಿ ಬೆಳೆಸಿಕೊಳ್ಳಬೇಕು ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.

ಪಟ್ಟಣದ ಜೇ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ 'ವಿಶ್ವ ಆನೆ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಗುಂಡ್ಲುಪೇಟೆ ತಾಲೂಕು ಶೇಕಡಾ 40 ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಬಂಡೀಪುರದಲ್ಲಿ ಸುಮಾರು 1,200 ಆನೆಗಳಿವೆ. ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಆನೆಗಳು ಕಾಡಿನಿಂದ ಹೊರಬಂದು ಕೃಷಿ ಜಮೀನುಗಳಿಗೆ ಪ್ರವೇಶಿಸುತ್ತಿವೆ. ಇಂತಹ ಸಂದರ್ಭದಲ್ಲಿ ಅವುಗಳಿಗೆ ತೊಂದರೆಯಾಗದಂತೆ ಸುರಕ್ಷಿತವಾಗಿ ಕಾಡಿಗೆ ಕಳುಹಿಸಲು ಜನರು ಅರಣ್ಯ ಸಿಬ್ಬಂದಿಯೊಂದಿಗೆ ಕೈಜೋಡಿಸಬೇಕು ಎಂದರು.

### ಬೆಳೆ ನಷ್ಟ ಪರಿಹಾರ ಮತ್ತು ಸಾಧಕ ಸಿಬ್ಬಂದಿಗೆ ಸನ್ಮಾನ

ಕುರುಬರಹುಂಡಿ ಹಾಗೂ ಮಂಚಹಳ್ಳಿ ಸೇರಿದಂತೆ ಆನೆಗಳ ದಾಳಿಯಿಂದ ಬೆಳೆ ನಷ್ಟವಾಗಿರುವ ಪ್ರದೇಶಗಳ ರೈತರಿಗೆ ಶೀಘ್ರವೇ ಪರಿಹಾರ ಹಣ ನೀಡುವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಆನೆ ಹಾಗೂ ಹುಲಿ ಸಂರಕ್ಷಣೆ ಕುರಿತು ಶಾಲಾ ಮಕ್ಕಳಿಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಹಾಗೆಯೇ ಆನೆಗಳನ್ನು ಸುರಕ್ಷಿತವಾಗಿ ಕಾಡಿಗೆ ಹಿಮ್ಮೆಟ್ಟಿಸುವ ಅಪಾಯಕಾರಿ ಕಾರ್ಯದಲ್ಲಿ ವಿಶೇಷ ಪರಿಣತಿ ಹೊಂದಿರುವ ಮೂವರು ಅರಣ್ಯ ಸಿಬ್ಬಂದಿಯನ್ನು ಶಾಸಕ ಎಚ್.ಎಂ. ಗಣೇಶಪ್ರಸಾದ್ ಅವರು ಗೌರವಿಸಿ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳು, ಪ್ರಮುಖ ಜನಪ್ರತಿನಿಧಿಗಳು, ಸಂರಕ್ಷಣಾವಾದಿಗಳು ಹಾಗೂ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ವನ್ಯಜೀವಿ ಸಂರಕ್ಷಣೆ ನಡುವಿನ ಸಮತೋಲನ

ಕಾಡಿನಿಂದ ಬರುವ ಆನೆಗಳು ರೈಲ್ವೆ ಕಂಬಿಗಳ ತಡೆಗೋಡೆಗಳನ್ನು ದಾಟಿ ಗ್ರಾಮಗಳಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಅವುಗಳ ಸಂಚಾರ ತಡೆಯಲು ಪರ್ಯಾಯ ಮಾರ್ಗಗಳ ಕುರಿತು ಚಿಂತನೆ ನಡೆಸಬೇಕಿದೆ ಎಂದು ಶಾಸಕರು ತಿಳಿಸಿದರು. ಹೊರಗಿನಿಂದ ಬರುವ ಪ್ರವಾಸಿಗರಿಗೆ ಆನೆಗಳನ್ನು ನೋಡುವುದು ಸಂತಸ ತಂದರೂ, ಅರಣ್ಯದಂಚಿನ ರೈತರಿಗೆ ಬೆಳೆ ನಷ್ಟ ಸೇರಿದಂತೆ ಹಲವು ತೀವ್ರ ಸಮಸ್ಯೆಗಳು ಎದುರಾಗುತ್ತವೆ. ಹೀಗಾಗಿ ವನ್ಯಜೀವಿಗಳ ಸಂರಕ್ಷಣೆಯ ಜೊತೆಗೆ ರೈತರ ಹಿತವನ್ನೂ ಕಾಯುವ ಸಮತೋಲಿತ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ. ಕಾಡು ಹಾಗೂ ವನ್ಯಜೀವಿಗಳನ್ನು ಸಂರಕ್ಷಿಸುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಆನೆಗಳ ಸಂತತಿ ವೃದ್ಧಿಗೆ ಆದ್ಯತೆ ನೀಡುವುದರ ಜೊತೆಗೆ ನಾಡಿನ ಅಭಿವೃದ್ಧಿಯೊಂದಿಗೆ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಕರೆ ನೀಡಿದರು.

### ಹೆಚ್ಚಿದ ಆನೆಗಳ ಸಂಖ್ಯೆ ಮತ್ತು ತಾಂತ್ರಿಕ ಕಣ್ಗಾವಲು

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಮಾತನಾಡಿ, ಆನೆಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಅವಿಭಾಜ್ಯ ಅಂಗವಾಗಿದ್ದು, ಮೈಸೂರು ದಸರಾ ಆನೆಗಳ ಜಂಬೂಸವಾರಿಯಿಲ್ಲದೆ ಪೂರ್ಣಗೊಳ್ಳುವುದಿಲ್ಲ ಎಂದರು. ಹಿಂದೆ ಕಳ್ಳಸಾಗಣೆದಾರ ವೀರಪ್ಪನ್ ಹಾವಳಿಯಿಂದ ವನ್ಯಜೀವಿಗಳು ಬಲಿಯಾಗಿದ್ದವು, ಆದರೆ ಆತನ ಅಂತ್ಯದ ನಂತರ ಅರಣ್ಯದಲ್ಲಿ ಸುರಕ್ಷಿತ ವಾತಾವರಣ ನಿರ್ಮಾಣವಾಗಿ ಆನೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಪ್ರಸ್ತುತ ಆನೆಗಳ ಚಲನವಲನದ ಮೇಲೆ ನಿಗಾ ಇಡಲು ಸ್ವಯಂಚಾಲಿತ ಚಿತ್ರಸಂಗ್ರಹ ಯಂತ್ರಗಳು ಹಾಗೂ ಹಾರುವ ಛಾಯಾಗ್ರಹಣ ಸಾಧನಗಳನ್ನು ಬಳಸಲಾಗುತ್ತಿದೆ. ಕೃಷಿ ಜಮೀನುಗಳಿಗೆ ನುಗ್ಗುವ ಆನೆಗಳನ್ನು ಸುರಕ್ಷಿತವಾಗಿ ಹಿಮ್ಮೆಟ್ಟಿಸಲು ನುರಿತ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ವಿವರಿಸಿದರು.

# ನಾರಾಯಣದಿಂದ ರೊಬೋಟಿಕ್ ಚಿಕಿತ್ಸೆ




ಮೈಸೂರು: ತಮ್ಮ ನಾರಾಯಣ ಆಸ್ಪತ್ರೆಯಲ್ಲಿ ಮಂಡಿ ಚಿಪ್ಪು ಸಮಸ್ಯೆಯಿಂದ ಬಳಲುತ್ತಿರುವವರಿಗೆ ಚಿಪ್ಪು ಬದಲಾವಣೆಗೆ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆ ಬದಲು ರೋಬೋಟಿಕ್ ಶಸ್ತ್ರಚಿಕಿತ್ಸಾ ಸೌಲಭ್ಯ ವ್ಯವಸ್ಥೆ ಅನುಸರಿಸಲಾಗುತ್ತಿದೆ ಎಂದು ಆಸ್ಪತ್ರೆಯ ಹಿರಿಯ ಮೂಳೆಚಿಕಿತ್ಸಾ ತಜ್ಞಾ ಡಾ.ಉಮೇಶ್ ಚೌಡಯ್ಯ ತಿಳಿಸಿದರು.

ಹಲವರು ಹೃದಯ ಸಂಬಂಧಿ ಇನ್ನಿತರ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ಅಂತಹವರಿಗೆ ಈ ರೋಬೋಟಿಕ್ ಶಸ್ತ್ರಚಿಕಿತ್ಸೆ ಅತ್ಯುಪಯುಕ್ತವಾಗಿದೆ. ಈ ರೋಗಿಗಳಿಗೆ ನಿಖರ ಶಸ್ತ್ರಚಿಕಿತ್ಸೆ ಹೆಚ್ಚು ಪರಿಣಾಮಕಾರಿಯಾಗಿದೆ. ಇದಲ್ಲದೆ, ಇದು ಶೀಘ್ರವಾಗಿ ಹಾಗೂ ಶೀಘ್ರ ಸಾಮಾನ್ಯ ನಿತ್ಯ ದಿನಚರಿಗೆ ಮರಳಲು ನೆರವಾಗುತ್ತದೆ. ಈ ಮೊದಲು ರೋಬೋಟಿಕ್ ಮಂಡಿ ಚಿಪ್ಪು ಅಳವಡಿಕೆಗಾಗಿ ರೋಗಿಗಳು ಚೆನ್ನೈ ಮೊದಲಾದ ನಗರಗಳಿಗೆ ತೆರಳಬೇಕಾಗಿತ್ತು. ಈಗ ಈ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ನಗರದ ತಮ್ಮ ಮಣಿಪಾಲ್ ಆಸ್ಪತ್ರೆಯಲ್ಲಿಯೇ ದೊರಕುವಂತಾಗಿದೆ ಎಂದರು. ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಪವನ್‌ಕುಮಾರ್ ಮಾತನಾಡಿ, ಸುಧಾರಿತ ಆರೋಗ್ಯ ಸೇವೆಯನ್ನು ರೋಗಿಗಳ ಮನೆ ಬಾಗಿಲಿಗೆ ತಲುಪಿಸುವುದು ತಮ್ಮ ಆಸ್ಪತ್ರೆಯ ಉದ್ದೇಶವಾಗಿದೆ. ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಸೇವೆ ಒದಗಿಸಲಾಗುತ್ತಿದೆ. ಹೀಗಾಗಿ ಯಾರಾದರೂ ಕೀಲುಗಳಲ್ಲಿ ನೋವು, ಊತ, ಜಡತ್ವ ಮೊದಲಾದ ಸಮಸ್ಯೆ ಎದುರಿಸುತ್ತಿದ್ದರೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

# ಮಿಮಿಕ್ರಿಗೋಪಿಗೆ ಹುಟ್ಟುಹಬ್ಬದ ಸಂಭ್ರಮ

ಚಾಮರಾಜನಗರ, ಮಿಮಿಕ್ರಿ ಗೋಪಿ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ರವಿಸಂತು ಬಳಗದಿಂದ ಸನ್ಮಾನಿಸಿ ಶುಭ ಕೋರಲಾಯಿತು ರವಿಸಂತು ಬಳಗ ಅಯೋಜಿಸಿದ ಹುಟ್ಟಹಬ್ಬದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಕೇಕ್ ಕತ್ತರಿಸಿ ಹಂಚಿ, ಡಾ.ರಾಜ್‌ಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಕನ್ನಡ ಚಳುವಳಿಗಾರ ವಾಟಾಳ್ ನಾಗರಾಜ್ ಸಂಭಾಷಣೆ ಮಿಮಿಕ್ರಿ ಮಾಡುವ ಮೂಲಕ ನಕ್ಕು ನಗಿಸಿದರು ಮಿಮಿಕ್ರಿ ಗೋಪಿ ಅವರಿಗೆ ರವಿ ಹಂತು ಬಳಗ ಸನ್ಮಾನಿಸಿ ಹುಟ್ಟು ಹಬ್ಬದ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಚಿತ್ರಕ ಇಬಿ ಮೋಟರ್ಸ್ ಮಾಲೀಕ ಎಸ್. ಸುರೇಶ್, ಗೌಡಿಕೆ ಸುರೇಶ್, ಕೆ.ವೀರಭದ್ರ ಸ್ವಾಮಿ, ಜನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಈಶ್ವರಿ ವೆಂಕಟೇಶ್, ಕಲೆ ನಟರಾಜು ಹಾಜರಿದ್ದರು.



# ಭೀಮನ ಅಮಾವಾಸ್ಯೆ: ಮಹದೇಶ್ವರ ಬೆಟ್ಟದಲ್ಲಿ ಭಕ್ತಸಾಗರ



**ಚಾಮರಾಜನಗರ,** ಭೀಮನ ಅಮಾವಾಸ್ಯೆ ಹಿನ್ನೆಲೆ ಪ್ರಸಿದ್ಧ ಯಾತ್ರಸ್ಥಳವಾದ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ರಾಜ್ಯದ ನಾನಾ ಭಾಗದಿಂದ ಭಕ್ತಸಾಗರವೇ ಹರಿದು ಬಂದಿದೆ.

ಭೀಮನ ಅಮಾವಾಸ್ಯೆ ಹಿನ್ನೆಲೆ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ದೇವಾಲಯವು ವಿವಿಧ ಬಗೆಯ ಪುಷ್ಪಗಳಿಂದ ಕಂಗೊಳಿಸುತ್ತಿದೆ. ತಮಿಳುನಾಡಿನ ಹೊಸೂರು ಮೂಲದ ಭಕ್ತ ರೋಸ್ ರಮೇಶ್ ಎಂಬವರು 15 ಲಕ್ಷ ರೂ. ವೆಚ್ಚದಲ್ಲಿ 1 ಲಾರಿ ಹೂವುಗಳಿಂದ ಪುಷ್ಪಲಂ ಕಾರ ಮಾಡಿಸಿದ್ದಾರೆ. ಗರ್ಭಗುಡಿ, ರಾಜಗೋಪುರ, ದೇವಾಲಯದ ಹೊರಾಂಗಣ, ರುದ್ರಾಕ್ಷಿ ಮಂಟಪ, ಬಸವ ವಾಹನ ಹಾಗೂ ರಥೋತ್ಸವ ಮಾರ್ಗವನ್ನು ಲಿಲಿಯಂ, ಆರ್ಕಿಡ್, ಕಾರ್ನೇಷನ್, ಜರ್ಬೆರಾ, ಡೈಸಿ, 5 ಬಗೆಯ ಗುಲಾಬಿಗಳು ಸೇರಿದಂತೆ ಒಟ್ಟು 20 ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿದ್ದು, ಭಕ್ತರ ಕಣ್ಮನ ಸೆಳೆಯುತ್ತಿದೆ. ಭೀಮನ ಅಮಾವಾಸ್ಯೆ ನಿಮಿತ್ತ ಮಂಗಳವಾರದಂದು ಮಹದೇಶ್ವರ ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ ನೆರವೇರಿದ್ದು ಇಂದು ಸರದಿ ಬೇಡಗಂಪಣ ಅರ್ಚಕರು ಸಾಂಪ್ರದಾಯಿಕ ವಿಶೇಷ ಪೂಜೆ ಸಲ್ಲಿಸಿ ಮಹದೇಶ್ವರನ ಲಿಂಗಕ್ಕೆ ಮಹಾ ಮಜ್ಜನ ನೆರವೇರಿಸಿ ಗಂಧಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ ಮಾಡಲಾಯಿತು.

ರಾಜ್ಯದ ನಾನಾ ಭಾಗದಿಂದ ಬಂದ ಭಕ್ತರು, ಸರತಿ ಸಾಲಿನಲ್ಲಿ ನಿಂತು ಮಾದಪ್ಪನನ್ನು ಕಣ್ತುಂಬಿಕೊಂಡು ಉಘೇ ಉಘೇ ಮಾದಪ್ಪ ಘೋಷವಾಕ್ಯ ಮೊಳಗಿಸಿದರು. ದೂಪ ದೀಪ ಬೆಳಗಿ ಪ್ರಾರ್ಥನೆ ಸಲ್ಲಿಸಿದರು. ಹರಕೆ ಕಟ್ಟಿಕೊಂಡ ಭಕ್ತರು ಮುಡಿಸೇವೆ ನೀಡಿದ್ದು ಕಂಡಿಬಂದಿತು. ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿ ರುವ ಭೀಮನ ಅಮಾವಾಸ್ಯೆ ಪೂಜೆಗೆ ಚಾಮ ರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್ ಮಾರ್ಗದರ್ಶನದಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯಾಕಟ್ಟಿನ ಸ್ಥಳಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಭಕ್ತಾದಿಗಳಿಗೆ ವಿಶೇಷ ದಾಸೋಹ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯಗಳ ವ್ಯವಸ್ಥೆ ಸೇರಿದಂತೆ ಮೂಲ ಸೌಕರ್ಯಗಳನ್ನು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಾಡಲಾಗಿದ್ದು ಭಕ್ತಾದಿಗಳಿಗೆ ವಿಶೇಷ ಹೆಚ್ಚುವರಿ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ.

## ಕಾವೇರಿ ಕ್ರಿಯಾಸಮಿತಿ ರಸ್ತೆ ತಡೆ, ಕಚೇರಿಗೆ ಬೀಗ ಹಾಕಿ ರೈತರ ಆಕ್ರೋಶ

# ಮತ್ತೇ ನೀರು ಬಿಡುವ ಆದೇಶ: ಮೈಸೂರಲ್ಲಿ ಮುಂದುವರೆದ ಹೋರಾಟ





ಮೈಸೂರು: ತಮಿಳುನಾಡಿಗೆ ನಿತ್ಯ ನೀರು ಹರಿಸುವಂತೆ ಆದೇಶಿರುವುದು ಅವೈಜ್ಞಾನಿಕವಾಗಿದ್ದು ಯಾವುದೇ ಕಾರಣಕ್ಕೂ ನೀರು ಹರಿಸಬಾರದು ಎಂದು ಆಕ್ರೋಶ ವ್ಯಕ್ತಪಡಿಸಿ ಕಾವೇರಿ ಕ್ರಿಯಾಸಮಿತಿ ರಸ್ತೆ ತಡೆ ನಡೆಸಿದರೆ, ರೈತ ಸಂಘ ಕಾಡಾ ಕಚೇರಿಗೆ ಬೀಗ ಹಾಕಿ ಆಕ್ರೋಶ ವ್ಯಕ್ತಪಡಿಸುವ ಮೂಲಕ ಮೈಸೂರಿನಲ್ಲಿ ಕಾವೇರಿ ಹೋರಾಟದ ಮುಂದುವರೆದಿವೆ.

ಕಾವೇರಿ ಕ್ರಿಯಾ ಸಮಿತಿವತಿಯಿಂದ ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಮೈಸೂರಿನ ಅಶೋಕ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಪ್ರತಿಭಟನೆ ನೇತೃತ್ವವಹಿಸಿದ್ದ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ಮಾತನಾಡಿ, ಕಾವೇರಿ ನೀರು ನಿರ್ವಹಣಾ ಮಂಡಳಿ ಅವೈಜ್ಞಾನಿಕ ಆದೇಶ ನೀಡಿದೆ. ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ನೀರು ಬಿಡಬಾರದು. ಕಾವೇರಿ ವಿಚಾರದಲ್ಲಿ ಮಂಡಳಿ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಇಲ್ಲಿನ ಪರಿಸ್ಥಿತಿ ಅರಿಯದೇ ಹೀಗೆ ಪ್ರಾರಂಭದಿಂದಲೂ ತೀರ್ಮಾನ ನೀಡುತ್ತಿರುವುದು ಖಂಡನೀಯ. ಹೀಗಾಗಿ ರಾಜ್ಯ ಸರ್ಕಾರ ಈ ಬಗ್ಗೆ ಸೂಕ್ತ ವರದಿ ತಯಾರಿಸಿ ಯಾವುದೇ ಕಾರಣಕ್ಕೂ ನೀರು ಬಿಡುಗಡೆಗೆ ಸಾಧ್ಯವಿಲ್ಲ ಎಂಬ ಅಂಶವನ್ನು ಮನವರಿಕೆ ಮಾಡಿಕೊಡುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು. ನಾಳಿನ ಬಂದ್ ಬೆಂಬಲಿಸಿ ಹೋರಾಟ ನಡೆಸುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ ಸಮಿತಿಯ ತೇಜೇಶ್ ಲೋಕೇಶ್ ಗೌಡ, ಮೆಲ್ಲಹಳ್ಳಿ ಮಹದೇವಸ್ವಾಮಿ, ಮೂಗೂರು ನಂಜುಂಡಸ್ವಾಮಿ, ಸುರೇಶ್ ಗೌಡ, ಕೆ.ಬಿ.ಲಿಂಗರಾಜು, ಸೋಮೇಗೌಡ, ಸಿಂದುವಳ್ಳಿ ಶಿವಕುಮಾರ್, ಸಂತೋಷ್, ಪ್ರಭುಶಂಕರ, ಹನುಮಂತಯ್ಯ, ಬಾಲಿ, ಶ್ರೀನಿವಾಸ, ಕೃಷ್ಣಪ್ಪ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಕಾಡಾ ಕಚೇರಿಗೆ ಬೀಗ: ಕರ್ನಾಟಕ ರಾಜ್ಯ ರೈತಸಂಘದ ಕಾರ್ಯಕರ್ತರು ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದ ಕಚೇರಿಗೆ ಮುತ್ತಿಗೆ ಹಾಕಿ ಕಚೇರಿಗೆ ಬೀಗ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರಿಗೂ ಪ್ರತಿಭಟನಾಕಾರರು ವಾಗ್ವಾದ ನಡೆಯಿತು. ಕೊನೆಗೆ ಕಚೇರಿ ಬಾಗಿಲಲ್ಲೇ ಕುಳಿತು ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಕರ್ನಾಟಕ ರಾಜ್ಯ ರೈತಸಂಘದ ಹೊಸಕೋಟೆ ಬಸವರಾಜು ಮಾತನಾಡಿ, ನೀರಾವರಿ ಇಲಾಖಾಧಿಕಾರಿಗಳು ರೈತರಿಗೆ ಒಂದು ವಿಚಾರ ಸ್ಪಷ್ಟಪಡಿಸಬೇಕು. ನಾಲೆಗಳಿಗೆ ನೀರು ಬಿಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ಹಾಗೊಂದು ವೇಳೆ ಸರ್ಕಾರ ನೀರು ಬಿಡುವುದಿಲ್ಲ ಎಂಬುದಾದರೆ ರೈತರಿಗೆ ಸೂಕ್ತ ಪರಿಹಾರ ಘೋಷಿಸಬೇಕು. ಇಲ್ಲದಿದ್ದರೆ ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಿ ನಾಲೆಗಳಿಗೆ ಈ ಕೂಡಲೇ ನೀರು ಹರಿಸಬೇಕೆಂದು ಆಗ್ರಹಿಸಿದರು. ಕಾವೇರಿ ನೀರು ನಿರ್ವಹಣಾ ಮಂಡಳಿ ಅವೈಜ್ಞಾನಿಕ ಆದೇಶ ಮಾಡಿರುವುದು ಅಘಾತ ತಂದಿದೆ. ಈ ಹಿನ್ನೆಲೆಯಲ್ಲಿ ವಾಟಾಳ್ ನಾಗರಾಜ್ ಬಂದ್‌ಗೆ ನಮ್ಮ ಸಂಪೂರ್ಣ ಬೆಂಬಲ ಘೋಷಿಸಿದ್ದು, ರೈತರಿಗಾಗಿ ಒಂದು ದಿನದ ಬಂದ್ ಮಾಡಬೇಕು. ನಾವು ಸಹ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟಿಸುವುದಾಗಿ ಹೇಳಿದರು. ರೈತಸಂಘದ ಪಿ.ಮರಂಕಯ್ಯ, ಹೊಸೂರು ಕುಮಾರ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ತ್ಯಾಜ್ಯ ವಿಂಗಡಣೆ, ವೈಜ್ಞಾನಿಕ ಸಂಸ್ಕರಣೆ ಹಾಗೂ ಸುರಕ್ಷಿತ ವಿಲೇವಾರಿಗೆ ಆದ್ಯತೆ ನೀಡಿ: ಅಧಿಕಾರಿಗಳಿಗೆ ಸೂಚನೆ

# ಘನ ತ್ಯಾಜ್ಯ ನಿರ್ವಹಣಾ ಕಾಮಗಾರಿಗಳ ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿ



**ಮಂಡ್ಯ:** ಸ್ವಚ್ಛ ಭಾರತ್ ಮಿಷನ್ (ನಗರ)–2.0 ಯೋಜನೆಯಡಿ ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2026ರ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಗಳು ಇಂದು ಹುತಗೆರೆ, ಮದ್ದೂರು ತಾಲೂಕಿಗೆ ಭೇಟಿ ನೀಡಿ ಪಾರಂಪರಿಕ ತ್ಯಾಜ್ಯ ವಿಲೇವಾರಿ ಕಾಮಗಾರಿ ಹಾಗೂ ಘನ ತ್ಯಾಜ್ಯ ನಿರ್ವಹಣಾ ಘಟಕದ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಹಾಯಾನ ಪಾರಂಪರಿಕ ತ್ಯಾಜ್ಯ ವಿಲೇವಾರಿ ಕಾಮಗಾರಿಯ ಪ್ರಗತಿ, ಈಗಾಗಲೇ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ, ತ್ಯಾಜ್ಯ ಸಂಸ್ಕರಣಾ ಪ್ರಕ್ರಿಯೆ ಹಾಗೂ ಘಟಕದ ಒಟ್ಟಾರೆ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲಾಯಿತು.

ಘನ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಪ್ರತ್ಯೇಕಿಸಿ, ಉಳಿದ ತ್ಯಾಜ್ಯವನ್ನು ಪರಿಸರ ಸ್ನೇಹಿ ಹಾಗೂ ವೈಜ್ಞಾನಿಕ ವಿಧಾನದಲ್ಲಿ ವಿಲೇವಾರಿ ಮಾಡುವ ಪ್ರಕ್ರಿಯೆಯ ಕುರಿತು ಅಧಿಕಾರಿಗಳಿಂದ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದರು.

ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ, ಸಮರ್ಪಕ ಸಂಗ್ರಹಣೆ, ವೈಜ್ಞಾನಿಕ ಸಂಸ್ಕರಣೆ, ಮರುಬಳಕೆ ಹಾಗೂ ಸುರಕ್ಷಿತ ವಿಲೇವಾರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಘನ ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಪರಿಸರ ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಹಾಗೂ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದರು.

2026ರ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕಿಸುವುದು, ವೈಜ್ಞಾನಿಕ ಸಂಸ್ಕರಣೆ ಹಾಗೂ ಜವಾಬ್ದಾರಿಯುತ ವಿಲೇವಾರಿಗೆ ಹೆಚ್ಚಿನ ಒತ್ತು ನೀಡುತ್ತವೆ. ನಿಯಮಗಳ ಪರಿಣಾಮಕಾರಿ ಅನುಷ್ಠಾನದ ಮೂಲಕ ನಗರ ಪ್ರದೇಶಗಳನ್ನು ?ತ್ಯಾಜ್ಯ ಮುಕ್ತ ನಗರ? ಗಳನ್ನಾಗಿ ರೂಪಿಸುವುದು ಸ್ವಚ್ಛ ಭಾರತ್ ಮಿಷನ್ (ನಗರ)–2.0ರ ಪ್ರಮುಖ ಉದ್ದೇಶವಾಗಿದೆ.

ಸ್ಥಳ ಪರಿಶೀಲನೆಯ ವೇಳೆ ಕಾಮಗಾರಿಗಳ ಗುಣಮಟ್ಟ, ಪ್ರಗತಿ, ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ವ್ಯವಸ್ಥೆಯಲ್ಲಿರುವ ಅಂಶಗಳನ್ನು ಪರಿಶೀಲಿಸಿ, ಅಗತ್ಯವಿರುವ ಕಡೆಗಳಲ್ಲಿ ತ್ವರಿತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪರಿಶೀಲನೆಯ ವಿವರಗಳು ಹಾಗೂ ಪ್ರಗತಿ ಮಾಹಿತಿಯನ್ನು ಜಿಲ್ಲಾ ಮಟ್ಟದ ಸ್ವಚ್ಛತಂ ಪೋರ್ಟಲ್‌ನಲ್ಲಿ ದಾಖಲಿಸಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಘನ ತ್ಯಾಜ್ಯ ನಿರ್ವಹಣೆಯನ್ನು ಕೇವಲ ಸ್ವಚ್ಛತಾ ಕಾರ್ಯವಾಗಿ ಪರಿಗಣಿಸದೆ, ಪರಿಸರ ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಮತ್ತು ಸುಸ್ಥಿರ ನಗರಾಭಿವೃದ್ಧಿಯ ಪ್ರಮುಖ ಭಾಗವಾಗಿ ಪರಿಗಣಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಈ ಸಂದರ್ಭದಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರ ಅಭಿವೃದ್ಧಿ ಕೋಶ ಹಾಗೂ ಸಂಬಂಧಪಟ್ಟ ಪುರಸಭೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಧ್ಯಕ್ಷ ಸ್ಥಾನ ನೀಡಲು ಮನವಿ

ಮಂಡ್ಯ: ಜಿಲ್ಲಾ ಮಾದಿಗ ಸಮುದಾಯ ಮುಖಂಡ ಎನ್.ಆರ್.ಚಂದ್ರಶೇಖರ್ ಅವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಒಕ್ಕೊರಲಿನಿಂದ ಅಭಿಪ್ರಾಯ ಸಂಗ್ರಹಿಸಲಾಯಿತು.

ಮುಖಂಡ ಕೆ.ಆರ್.ಪೇಟೆ ಪುಟ್ಟರಾಜು ಮಾತನಾಡಿ, ಎರಡನೇ ಬಾರಿಗೆ ಎನ್.ಚಲುವರಾಯಸ್ವಾಮಿ ಹಾಗೂ ಮತ್ತೊಂದು ಗರಿ ಎಂಬಂತೆ ಪಿ.ಎಂ.ನರೇಂದ್ರಸ್ವಾಮಿ ಅವರು ಸಚಿವರಾಗಿ ಆಯ್ಕೆಯಾಗಿದ್ದಾರೆ. ಜಿಲ್ಲೆಯಲ್ಲಿ ಮಾದಿಗ ಸಮುದಾಯ ಪ್ರಬಲವಾಗಿದೆ. ಎಲ್ಲಾ ಸಮುದಾಯಗಳಿಗೂ ಸೂಕ್ತ ಸ್ಥಾನಮಾನವನ್ನು ಸರ್ಕಾರ ನೀಡಿದೆ. ಅದರಂತೆ ಮಂಡ್ಯ ಜಿಲ್ಲೆಗೂ ಸ್ಥಾನ ನೀಡುವ ವಿಶ್ವಾಸವಿದೆ. ನಮ್ಮ ಜನಾಂಗದ ಮುಖಂಡ ಎನ್.ಆರ್.ಚಂದ್ರಶೇಖರ್ ಅವರಿಗೆ ನಿಗಮ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಮಾದಿಗ ಜನಾಂಗದ ಮುಖಂಡ ಎನ್.ಆರ್.ಚಂದ್ರಶೇಖರ್ ಮಾತನಾಡಿ, ಕಾಂಗ್ರೆಸ್‌ಗಾಗಿ ದುಡಿಯುತ್ತಿರುವ ನನಗೆ ಒಂದು ಸ್ಥಾನ ನೀಡಬೇಕೆನ್ನುವುದು ನಮ್ಮ ಸಮುದಾಯದ ಬೇಡಿಕೆಯಾಗಿದೆ. ಅದನ್ನು ಈಡೇರಿಸುವ ವಿಶ್ವಾಸವಿದೆ ಎಂದರು.

ಸಭೆಯಲ್ಲಿ ಮುಖಂಡರಾದ ಅಂಬೂಜಿ, ವೈ.ಜೆ.ಸ್ವಾಮಿ. ಪ್ರಸನ್ನ, ಅಲ್ಲಾಪಟ್ಟಣ ಕುಮಾರ್, ಎಂ.ಪಿ.ಚಂದ್ರಶೇಖರ್, ನಾಗೇಶ್ ಹುನಗನಹಳ್ಳಿ, ವಿಜಯ್‌ಕುಮಾರ್ ಚಂದಗಾಲು ಭಾಗವಹಿಸಿದ್ದರು.




# ಮದ್ದೂರಿನ ಸರ್ವೆ ಇಲಾಖೆಯ ವಿವಿಧ ಸೇವೆಗಳ ತ್ವರಿತ ವಿಲೇವಾರಿಗೆ ಡಿಸಿ ಸೂಚನೆ



**ಮದ್ದೂರು:** ಮದ್ದೂರು ತಾಲೂಕಿನಲ್ಲಿ ಸರ್ವೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ವಿವಿಧ ಸೇವೆಗಳ ಪ್ರಗತಿ ಹಾಗೂ ಬಾಕಿ ಪ್ರಕರಣಗಳ ವಿಲೇವಾರಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಬಾಕಿ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು, ಬಾಕಿ ಇರುವ ದರ್ಕಾಸ್ತು ಪೋಡಿ, ಪೋಡಿ, ಇ–ಸ್ಕೆಚ್ ಹಾಗೂ ಇನ್ನಿತರ ಸರ್ವೆ ಪ್ರಕರಣಗಳ ಪ್ರಗತಿಯನ್ನು ಪರಿಶೀಲಿಸಿದರು.

ಸರ್ವೆ ಇಲಾಖೆಯ ಹದ್ದುಬಸ್ತು, ಪೋಡಿ, ದರ್ಕಾಸ್ತು ಪೋಡಿ, ಇ–ಸ್ಕೆಚ್, ಭೂಮಾಪನ, ಜಮೀನು ಸರ್ವೆ, ಮೋಜಣಿ, ವಿಭಜನೆ, ಪುನರ್‌ಮಾಪನ ಸೇರಿದಂತೆ ವಿವಿಧ ಸರ್ವೆ ಸಂಬಂಧಿತ ಸೇವೆಗಳು ಹಾಗೂ ಸಾರ್ವಜನಿಕರಿಂದ ಸ್ವೀಕರಿಸಲಾದ ಅರ್ಜಿಗಳ ಬಾಕಿ ವಿಲೇವಾರಿಗೆ ಆದ್ಯತೆ ನೀಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ವಿಶೇಷವಾಗಿ ದೀರ್ಘಕಾಲದಿಂದ ಬಾಕಿ ಇರುವ ಪ್ರಕರಣಗಳನ್ನು ಪ್ರಕರಣವಾರು ಪರಿಶೀಲಿಸಿ, ಸ್ಥಳ ಪರಿಶೀಲನೆ ಅಗತ್ಯವಿರುವ ಪ್ರಕರಣಗಳಲ್ಲಿ ತ್ವರಿತವಾಗಿ ಸ್ಥಳ ಪರಿಶೀಲನೆ ಕೈಗೊಂಡು, ನಿಯಮಾನುಸಾರ ಅರ್ಹ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಿದರು.

ಸಾರ್ವಜನಿಕರು ಸರ್ವೆ ಇಲಾಖೆಯ ಸೇವೆಗಳನ್ನು ಪಡೆಯಲು ಸಲ್ಲಿಸಿರುವ ಅರ್ಜಿಗಳು ಅನಗತ್ಯವಾಗಿ ಬಾಕಿ ಉಳಿಯದಂತೆ ಕ್ರಮವಹಿಸಿ, ನಿಗದಿತ ಅವಧಿಯಲ್ಲಿ ಸೇವೆಗಳನ್ನು ಒದಗಿಸುವ ಮೂಲಕ ಸಾರ್ವಜನಿಕರಿಗೆ ತ್ವರಿತ ಹಾಗೂ ಪಾರದರ್ಶಕ ಸೇವೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಮದ್ದೂರು ತಾಲೂಕಿನಲ್ಲಿ ಸರ್ವೆ ಇಲಾಖೆಯ ವಿವಿಧ ಸೇವೆಗಳ ಬಾಕಿ ಪ್ರಕರಣಗಳ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ, ಬಾಕಿ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



# ಜಿಲ್ಲಾ ಪಂಚಾಯಿತಿ ಸಿಇಒ ವಿರುದ್ಧ –ಗೋ ಬ್ಯಾಕ್ ಚಳವಳಿಗೆ ಕರೆ

## ಕರ್ತವ್ಯ ಲೋಪ, ಭ್ರಷ್ಟಾಚಾರ ಹಾಗೂ ಸಾರ್ವಜನಿಕರಿಗೆ ತೊಂದರೆ ಆರೋಪ: ಆ.17ರಂದು ಬೃಹತ್ ಪ್ರತಿಭಟನೆ




ಮಂಡ್ಯ: ಜಿ.ಪಂ ಸಿಇಓ ಕೆ.ಆರ್.ನಂದಿನಿ ಅವರ ಕರ್ತವ್ಯ ಲೋಪ ಮತ್ತು ಸಾರ್ವಜನಿಕರ ಕೆಲಸ ಮಾಡದೇ ತೊಂದರೆ ನೀಡುತ್ತಿರುವುದನ್ನು ಖಂಡಿಸಿ ಆ.17ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತಿ ಆವರಣದಲ್ಲಿ "ಗೋ ಬ್ಯಾಕ್ ಜಿ.ಪಂ ಸಿಇಒ" ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಭ್ರಷ್ಟಾಚಾರ ವಿರೋಧಿ ವೇದಿಕೆಯ ರಾಜ್ಯ ಉಪಾಧ್ಯಕ್ಷ ಜಿ.ಎಸ್.ಜಯರಾಂ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಜಿ.ಪಂ ಸಿಇಓ ಅವರ ವಿರುದ್ಧ ಶೋಷಣೆ, ಭ್ರಷ್ಟಾಚಾರ ಮತ್ತು ತಾರತಮ್ಯದ ಆರೋಪಗಳು ಕೇಳಿಬಂದಿವೆ. ಅವರ ವಿರುದ್ಧ ಬೃಹತ್ ಪ್ರತಿಭಟನೆಗೆ ಚಳವಳಿಗಾರರು ಕರೆ ನೀಡಿದ್ದಾರೆ ಎಂದರು. ಜಿ.ಪಂ ಆವರಣದಲ್ಲಿದ್ದ ಸುಮಾರು 60 ಟನ್ ಕಬ್ಬಿಣವನ್ನು ಇದೇ ಮಾರ್ಚ್11ರಂದು ನಿಯಮಬಾಹಿರವಾಗಿ ಸಾಗಾಣಿಕೆ ಮಾಡಲಾಗಿದೆ. ಈ ಕೃತ್ಯದಲ್ಲಿ ಕೆ.ಆರ್.ಐ.ಡಿ.ಎಲ್. ಅಧಿಕಾರಿ ಸೋಮಶೇಖರ್ ಹಾಗೂ ಉಪಕಾರ್ಯದರ್ಶಿ ಶೀವಲಿಂಗಯ್ಯ ಅವರು ನೇರವಾಗಿ ಭಾಗಿಯಾಗಿದ್ದಾರೆಂದು ಆರೋಪಿಸಿದರು. ಮೈಸೂರು ಮೂಲದ ಗ್ಯಾರೇಜ್ ಮಾಲೀಕರಿಗೆ ಜಿ.ಪಂ ಆವರಣದಲ್ಲಿದ್ದ 60 ಟನ್ ಕಬ್ಬಿಣವನ್ನು ಯಾವುದೇ ಟೆಂಡರ್ ಪ್ರಕ್ರಿಯೆ ನಡೆಸದೆ ಕಾನೂನುಬಾಹಿರವಾಗಿ ಮಾರಾಟ ಮಾಡಲಾಗಿದೆ. ಈ ಸಂಬಂಧ ನೀಡಿದ ದೂರುಗಳ ಬಗ್ಗೆ ಯಾವುದೇ ಶಿಸ್ತು ಕ್ರಮ ಕೈಗೊಂಡಿಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ಕೋರಿದ್ದ ಅರ್ಜಿಗಳಿಗೆ ಮಾರ್ಚ್ 31, 2026ರಂದು ತಪ್ಪು ಹಾಗೂ ದಾರಿತಪ್ಪಿಸುವ ಉತ್ತರ ನೀಡಲಾಗಿದೆ ಎಂದು ದೂರಿದರು. ಜಿ.ಪಂ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಪ್ರಭಾರ ಅಧಿಕಾರಿಗಳ ಕಾರುಗಳು ದುರ್ಬಳಕೆ, ಎನ್‌ಎಂಎಂಎನ್ ಹಾಜರಾಗಿ ಸಂಬಂಧ ದೂರು ನೀಡಿದರೂ ಕ್ರಮವಿಲ್ಲ. ಕೆ.ಆರ್.ಪೇಟೆ ಮಂದಗೆರೆ ಗ್ರಾ.ಪಂನಲ್ಲಿ ನರೇಗಾ ಅವ್ಯವಹಾರ ಸಂಬಂಧ ತನಿಖಾ ವರದಿಯಂತೆ ಯಾರ ಮೇಲು ಕ್ರಮ ವಹಿಸಿಲ್ಲ. ಜಿ.ಪಂನಲ್ಲಿನ ಇಬ್ಬರೂ ಕಾರ್ಯದರ್ಶಿಗಳು ಸೋಮವಾರದಂದು ಕಚೇರಿಯಲ್ಲಿದ್ದು ಸಾರ್ವಜನಿಕರ ಕೈಗೆ ಸಿಗುತ್ತಿಲ್ಲ ಎಂಬುದು ಸೇರಿದಂತೆ ನಾನಾ ಲೋಪಗಳನ್ನು ಸಂಬಂಧ ಹೋರಾಟ ಮಾಡಲಾಗುವುದೆಂದರು. ಜಿ.ಪಂ ಆಡಳಿತ ಕೇಂದ್ರದಲ್ಲಿ ನಡೆಯುತ್ತಿರುವ ಅಕ್ರಮ, ಸಾರ್ವಜನಿಕ ಸ್ವತ್ತಿನ ಲೂಟಿ ಮತ್ತು ತಾರತಮ್ಯದ ಆಡಳಿತವನ್ನು ಸಹಿಸಲು ಸಾಧ್ಯವಿಲ್ಲ. ಸಂಬಂಧಪಟ್ಟ ಮೇಲಧಿಕಾರಿಗಳು ತಕ್ಷಣ ಸೂಕ್ತ ತನಿಖೆ ನಡೆಸಿ ಶಿಸ್ತುಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಆ.17ರಂದು ಬೃಹತ್ ಮಟ್ಟದಲ್ಲಿ 'ಗೋ ಬ್ಯಾಕ್ ಸಿಇಒ' ಘೋಷಣೆಯಡಿ ನಿರ್ಧಿಷ್ಟಾವಧಿ ಹೋರಾಟ ನಡೆಸಿ ಮುಖ್ಯಮಂತ್ರಿಗಳ ಗಮನ ಸೆಳೆಯುವುದಾಗಿ ಎಚ್ಚರಿಸಿದ್ದಾರೆ. ಗೋಷ್ಠಿಯಲ್ಲಿ ಸಾಮಾಜಿ ಕಾರ್ಯಕರ್ತ ಎಂ.ಚಾಮರಾಜು, ಆನಂದ್, ವೇದಮೂರ್ತಿ, ಶಿವಪ್ರಕಾಶ್ ಇದ್ದರು.

# ಹನೂರು: ಕೃಷಿ ವೆಚ್ಚಕ್ಕೆ ಕಡಿವಾಣ : ಯಾಂತ್ರೀಕರಣ ಯೋಜನೆಯಡಿ ಸಹಾಯಧನದಲ್ಲಿ ಮಿನಿ ಟ್ರಾಕ್ಟರ್, ಪವರ್ ಟಿಲ್ಲರ್, ಬ್ರಷ್ ಕಟ್ಟರ್



ಹನೂರು: ಕಾರ್ಮಿಕರ ಕೊರತೆ ಮತ್ತು ಹೆಚ್ಚುತ್ತಿರುವ ಕೃಷಿ ವೆಚ್ಚದಿಂದ ಪರದಾಡುತ್ತಿರುವ ರೈತರಿಗೆ ರಾಜ್ಯ ಸರ್ಕಾರದಿಂದ ಸಿಹಿ ಸುದ್ದಿ. ಕೃಷಿ ಯಾಂತ್ರೀಕರಣ ಯೋಜನೆಯಡಿ ಸಹಾಯಧನದಲ್ಲಿ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಹನೂರು ತಾಲೂಕು ಕೃಷಿ ಇಲಾಖೆ ಅರ್ಜಿ ಆಹ್ವಾನಿಸಿದೆ.

ಹನೂರು ರೈತ ಸಂಪರ್ಕ ಕೇಂದ್ರದಲ್ಲಿ ಸಾಮಾನ್ಯ ವರ್ಗದ ರೈತರಿಗೆ ಈ ಸೌಲಭ್ಯ ಲಭ್ಯವಿದೆ ಎಂದು ತಾಲೂಕು ಕೃಷಿ ಅಧಿಕಾರಿ ನಾಗೇಂದ್ರ ಅವರು ತಿಳಿಸಿದ್ದಾರೆ.

**ಮಿನಿ ಟ್ರಾಕ್ಟರ್‌ನಿಂದ ಬ್ರಷ್ ಕಟ್ಟರ್‌ವರೆಗೆ ಅವಕಾಶ:** ಈ ಯೋಜನೆಯಡಿ ರೈತರು ಶೇ.50 ರಿಂದ ಶೇ.90 ರವರೆಗೆ ಸಹಾಯಧನದೊಂದಿಗೆ ಆಧುನಿಕ ಕೃಷಿ ಯಂತ್ರಗಳನ್ನು ಪಡೆದುಕೊಳ್ಳಬಹುದು.

ಲಭ್ಯವಿರುವ ಪ್ರಮುಖ ಯಂತ್ರಗಳು:

1. ಮಿನಿ ಟ್ರಾಕ್ಟರ್ – ಸಣ್ಣ ಜಮೀನಿನ ಉಳುಮೆಗೆ ಅನುಕೂಲ
2. ಪವರ್ ಟಿಲ್ಲರ್ – ಕಡಿಮೆ ಸಮಯದಲ್ಲಿ ಭೂಮಿ ಹದ ಮಾಡಲು
3. ಪವರ್ ವೀಡರ್ – ಕಳೆ ತೆಗೆಯುವ ಕೆಲಸ ಸುಲಭ
4. ಚಾಫ್ ಕಟ್ಟರ್ – ಜಾನುವಾರುಗಳಿಗೆ ಮೇವು ತಯಾರಿಸಲು
5. ಬ್ರಷ್ ಕಟ್ಟರ್ – ಹುಲ್ಲು, ಪೊದೆ ತೆರವುಗೊಳಿಸಲು
6. ಇತರೆ ಕೃಷಿ ಪರಿಕರಗಳು

ಆಧುನಿಕ ಯಂತ್ರಗಳ ಬಳಕೆಯಿಂದ ಕೃಷಿ ಉತ್ಪಾದನೆ ಹೆಚ್ಚುವುದರ ಜೊತೆಗೆ ಕಾರ್ಮಿಕ ಅವಲಂಬನೆ ಕಡಿಮೆಯಾಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಿ

ಆಸಕ್ತ ರೈತರು ಅಗತ್ಯ ದಾಖಲಾತಿಗಳೊಂದಿಗೆ ಹನೂರು ತಾಲೂಕು ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಬೇಕು. ಅರ್ಜಿಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ಪರಿಶೀಲಿಸಿ ಮಂಜೂರು ಮಾಡಲಾಗುತ್ತದೆ.

**ಅಗತ್ಯ ದಾಖಲಾತಿಗಳ ಪಟ್ಟಿ:**

- ಆಧಾರ್ ಕಾರ್ಡ್ ನಕಲು
- ಪ್ರಸ್ತುತ ಸಾಲಿನ ಪಹಣಿ (ಖಖಿಅ)
- ಬ್ಯಾಂಕ್ ಪಾಸ್‌ಬುಕ್ ನಕಲು
- 2 ಪಾಸ್‌ಪೋರ್ಟ್ ಸೈಜ್ ಭಾವಚಿತ್ರ
- ನೋಟರಿ ಮಾಡಿಸಿದ ಸ್ವಯಂ ಘೋಷಣಾ ಪತ್ರ

**ಅಧಿಕಾರಿಗಳ ಕರೆ**

"ಸಣ್ಣ ಮತ್ತು ಅತಿ ಸಣ್ಣ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು. ಯಂತ್ರೀಕರಣದಿಂದ ಕೃಷಿ ಸುಲಭವಾಗುವುದರ ಜೊತೆಗೆ ಲಾಭವೂ ಹೆಚ್ಚಾಗುತ್ತದೆ" ಎಂದು ಕೃಷಿ ಅಧಿಕಾರಿ ನಾಗೇಂದ್ರ ಅವರು ಹೇಳಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ರೈತರು ಹನೂರು ತಾಲೂಕು ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರವನ್ನು ಕಾರ್ಯಾಲಯದ ಸಮಯದಲ್ಲಿ ಸಂಪರ್ಕಿಸಬಹುದು.

# ಗ್ರಾಮೀಣ ಶಿಕ್ಷಣಕ್ಕೆ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಬೆಂಬಲ

## ವಿಜಯಪುರ ಜಿಲ್ಲೆಯ 9 ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ




**ರಾಮನಗರ:** ಬಿಡದಿಯ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ವಿಜಯಪುರ ಜಿಲ್ಲೆಯ ಗ್ರಾಮೀಣ ಭಾಗದಲ್ಲಿರುವ 9 ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಸೌಕರ್ಯ ಬೆಂಬಲದ ಮೂಲಕ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿರುವ ಸಮಗ್ರ ಶೈಕ್ಷಣಿಕ ಅಭಿವೃದ್ಧಿ ಉಪಕ್ರಮವನ್ನು ಇಂದು ಘೋಷಿಸಿದೆ.

ಟಿಕೆಎಂ ಐದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ (ಜಿಎಚ್‌ಪಿಎಸ್) ವಿಜಯಪುರ ಜಿಲ್ಲೆಯ ಅಗಸನಹಳ್ಳಿ, ಜಂಬಗಿ, ಸೋಮದೇವರಹಟ್ಟಿ, ಸುಟಗುಂಡಿ ಮತ್ತು ನಂದ್ಯಾಲ್‌ನಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಶಂಕುಸ್ಥಾಪನೆ ಸಮಾರಂಭವನ್ನು ನಡೆಸಿತು. ಈ ಶಾಲೆಗಳು 15 ಕ್ಕೂ ಹೆಚ್ಚು ನೆರೆಹೊರೆಯ ಹಳ್ಳಿಗಳ ವಿದ್ಯಾರ್ಥಿಗಳಿಗೆ ಸೇವೆ ಸಲ್ಲಿಸುತ್ತವೆ, 1 ರಿಂದ 8ನೇ ತರಗತಿಯವರೆಗೆ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಶಿಕ್ಷಣ ನೀಡುತ್ತವೆ. ಈ ಯೋಜನೆಯು ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣ, ತರಗತಿಯ ಪೀಠೋಪಕರಣಗಳನ್ನು ಒದಗಿಸುವುದು ಮತ್ತು ಮೂಲಸೌಕರ್ಯಗಳ ಅಂತರವನ್ನು ಪರಿಹರಿಸಲು ಮತ್ತು ಅಗತ್ಯ ಸೌಲಭ್ಯಗಳ ಲಭ್ಯತೆಯನ್ನು ಸುಧಾರಿಸಲು ನೈರ್ಮಲ್ಯ ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಿದೆ.

ಬಬಲೇಶ್ವರ, ವಿಜಯಪುರ–ಕರ್ನಾಟಕ ಪಬ್ಲಿಕ್ ಸ್ಕೂಲ್, ಮಾಮಡಪುರದ 4 ಸರ್ಕಾರಿ ಸಂಸ್ಥೆಗಳಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಿದ ಶೈಕ್ಷಣಿಕ ಮೂಲಸೌಕರ್ಯಗಳನ್ನು ಕಂಪನಿಯು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ.ಎಂ.ಬಿ.ಪಾಟೀಲ್, ಟೊಯೊಟಾ ಕಿರ್ಲೋಸ್ಕರ್ ಮೋಟಾರ?ಸ್ ನ ಉಪಾಧ್ಯಕ್ಷ ರಮೇಶ್ ರಾವ್ ಮತ್ತು ಹಿರಿಯ ನಾಯಕರ ಉಪಸ್ಥಿತಿಯಲ್ಲಿ ಉದ್ಘಾಟಿಸಿತು. ಸರ್ಕಾರಿ ಪ್ರೌಢಶಾಲೆ, ಹೆಬ್ಬಲಟ್ಟಿ; ಸರ್ಕಾರಿ ಪ್ರೌಢಶಾಲೆ, ಬೋಲ್ಚಿಕಲಕ್ಕಿ; ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು, ಅರ್ಜುನಗಿ. ಪೂರ್ಣಗೊಂಡ ಮೂಲಸೌಕರ್ಯವು ಹೊಸ ತರಗತಿ ಕೊಠಡಿಗಳು, ನವೀಕರಿಸಿದ ನೈರ್ಮಲ್ಯ ಸೌಲಭ್ಯಗಳು, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಗಳನ್ನು ಬೆಂಬಲಿಸಲು ಸುಧಾರಿತ ಅಡುಗೆ ಮೂಲಸೌಕರ್ಯ ಮತ್ತು ಸುರಕ್ಷಿತ, ಹೆಚ್ಚು ಅನುಕೂಲಕರ ಮತ್ತು ವಿದ್ಯಾರ್ಥಿ ಸ್ನೇಹಿ ಕಲಿಕೆಯ ವಾತಾವರಣವನ್ನು ಸೃಷ್ಟಿಸಲು ಅಗತ್ಯ ತರಗತಿಯ ಪೀಠೋಪಕರಣಗಳನ್ನು ಒಳಗೊಂಡಿದೆ. ಈ ಉಪಕ್ರಮವು ವಾರ್ಷಿಕವಾಗಿ 2000 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ನಿರೀಕ್ಷೆಯಿದೆ.

ಈ ಸಂದರ್ಭದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ.ಎಂ.ಬಿ.ಪಾಟೀಲ್ ಮಾತನಾಡಿನಮ್ಮಹಳ್ಳಿಗಳಪ್ರಗತಿಯುನಮ್ಮಮಕ್ಕಳಿಗೆ ಲಭ್ಯವಿರುವ ಶಿಕ್ಷಣದ ಗುಣಮಟ್ಟದೊಂದಿಗೆ ನಿಕಟ ಸಂಬಂಧ ಹೊಂದಿದೆ. ಗ್ರಾಮೀಣ ಶಾಲೆಗಳನ್ನು ಬಲಪಡಿಸುವುದು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಕುಟುಂಬಗಳು ಮತ್ತು ಸಮುದಾಯಗಳಿಗೆ ತಲೆಮಾರುಗಳ ಕಾಲ ಪ್ರಯೋಜನವನ್ನು ನೀಡುವ ಹೂಡಿಕೆಯಾಗಿದೆ. ಬಬಲೇಶ್ವರದಾದ್ಯಂತ ಶೈಕ್ಷಣಿಕ ಮೂಲಸೌಕರ್ಯಗಳನ್ನು ಹೆಚ್ಚಿಸುವಲ್ಲಿ ಸರ್ಕಾರದೊಂದಿಗೆ ಪಾಲುದಾರಿಕೆ ಹೊಂದಿದ್ದಕ್ಕಾಗಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಅನ್ನು ನಾನು ಶ್ಲಾಘಿಸುತ್ತೇನೆ. ಇಂತಹ ಉಪಕ್ರಮಗಳು ಮಕ್ಕಳು ಆತ್ಮವಿಶ್ವಾಸದಿಂದ ಕಲಿಯುವ, ಶಿಕ್ಷಕರು ಗುಣಮಟ್ಟದ ಶಿಕ್ಷಣವನ್ನು ಹೆಚ್ಚು ಪರಿಣಾಮಕಾರಿಯಾಗಿ ನೀಡುವ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡುತ್ತವೆ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ಉಜ್ವಲ ಭವಿಷ್ಯವನ್ನು ನಿರ್ಮಿಸಿಕೊಳ್ಳಲು ಅವಕಾಶವಿದೆ.

ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಕಾರ್ಪೊರೇಟ್ ವ್ಯವಹಾರಗಳ ಪ್ರಾದೇಶಿಕ ಮುಖ್ಯಸ್ಥರು ಮತ್ತು ಕಾರ್ಯನಿರ್ವಾಹಕ ಉಪಾಧ್ಯಕ್ಷವಿಕ್ರಮ್‌ಗುಲಾಟಿಯವರುಮಾತನಾಡಿ, ಶೈಕ್ಷಣಿಕ ಮೂಲಸೌಕರ್ಯಗಳು ಸುಧಾರಿಸಿದಾಗ, ಇಡೀ ಪ್ರದೇಶವನ್ನು ಬಲಪಡಿಸುವ ಮೂಲಕ ಪರಿಣಾಮವು ತರಗತಿಯನ್ನು ಮೀರಿ ವಿಸ್ತರಿಸುತ್ತದೆ. ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ನಲ್ಲಿ, ಸ್ಥಳೀಯ ಸಮುದಾಯಗಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಮತ್ತು ದೀರ್ಘಕಾಲೀನ ಪರಿಹಾರಗಳೊಂದಿಗೆ ಪ್ರತಿಕ್ರಿಯಿಸುವ ಮೂಲಕ ಅರ್ಥಪೂರ್ಣ ಅಭಿವೃದ್ಧಿಯು ಪ್ರಾರಂಭವಾಗುತ್ತದೆ ಎಂದು ನಾವು ನಂಬುತ್ತೇವೆ. ವಿಜಯಪುರದ ಬಾಬಲೇಶ್ವರದಲ್ಲಿ ಗ್ರಾಮೀಣ ಶಿಕ್ಷಣದಲ್ಲಿ ನಮ್ಮ ನಿರಂತರ ಹೂಡಿಕೆಯು ಇಂದು ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಸಹಾಯ ಮಾಡುತ್ತದೆ ಮತ್ತು ನಾಳೆ ಬಲವಾದ ಮತ್ತು ಹೆಚ್ಚು ಸ್ಥಿತಿಸ್ಥಾಪಕ ಸಮುದಾಯಗಳಿಗೆ ಕೊಡುಗೆ ನೀಡುತ್ತದೆ. ಎಂದು ಹೇಳಿದರು. ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಟಿ.ಕೆ.ಎಂ. ಅಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ವಿಶ್ವ ಯೋಗದಲ್ಲಿ ತನ್ವಿ ಮಿಂಚು



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 94

ಸಹ್ಯಾದ್ರಿಯ ತಪ್ಪಲಲ್ಲಿ, ವಶಿಷ್ಠಿ ನದಿಯ ಇಂಪಾದ ಜುಳುಜುಳು ನಾದದ ನಡುವೆ ನೆಲೆಸಿರುವ ಮಹಾರಾಷ್ಟ್ರದ ಚಿಪ್ಲೂಣ್ ಇಂದು ಜಗತ್ತನ್ನೇ ತನ್ನೆಡೆಗೆ ತಿರುಗಿ ನೋಡುವಂತೆ ಮಾಡಿದೆ! ರತ್ನಗಿರಿ ಜಿಲ್ಲೆಯ ಈ ವಾಣಿಜ್ಯ ನಗರಿ, ಪರಶುರಾಮನ ಪಾದಸ್ಪರ್ಶದಿಂದ ಪುನೀತವಾದ ನೆಲ, ಈಗ ಚಿನ್ನದ ಹುಡುಗಿ ತನ್ವಿ ರೇಡಿಜ್‌ಗೆ ಜನ್ಮವಿತ್ತ ಹೆಮ್ಮೆಯ ತೊಟ್ಟಿಲಾಗಿದೆ.

ಅಹಮದಾಬಾದ್‌ನಲ್ಲಿ ಜೂನ್ 4ರಿಂದ 8ರವರೆಗೆ ನಡೆದ ವಿಶ್ವ ಯೋಗಾಸನ ಕದನದಲ್ಲಿ, 55 ದೇಶಗಳ ಘಟಾನುಘಟಿಗಳನ್ನೇ ದಂಗುಬಡಿಸಿದರು ತನ್ವಿ. ಅವರ ಪ್ರತಿ ಆಸನವೂ ಒಂದು ಕಾವ್ಯ. ಸಮತೋಲನದಲ್ಲಿ ಹಿಮಾಲಯದ ಸ್ಥೈರ್ಯ, ಬಳುಕುವಿಕೆಯಲ್ಲಿ ನದಿಯ ಲಾಲಿತ್ಯ, ನೋಟದಲ್ಲಿ ಯೋಗಿಯ ತೇಜಸ್ಸು. ಚಿನ್ನದ ಪದಕ ಅವರ ಕೊರಳನ್ನೇರಿದ್ದು ಆಶ್ಚರ್ಯವಲ್ಲ, ಅನಿವಾರ್ಯವಾಗಿತ್ತು.

ಕೊಂಕಣ ರೈಲ್ವೆಯ ಸದ್ದಿನೊಂದಿಗೆ ಬೆಳೆದ ಈ ಹುಡುಗಿ, ಡಿ.ಬಿ.ಜೆ. ಕಾಲೇಜಿನ




ತರಗತಿಯಿಂದ ಪಾಗ್ ವ್ಯಾಯಾಮಶಾಲೆಯ ಗರಡಿಗೆ ಧಾವಿಸುತ್ತಿದ್ದಳು. ಗುರು ರಣವೀರ್ ಸಾವಂತ್ ಮಾರ್ಗದರ್ಶನದಲ್ಲಿ, ಮುಂಜಾವಿನ ಇಬ್ಬನಿಯೊಂದಿಗೆ ಬೆರೆತ ಬೆವರು ಇಂದು ವಿಶ್ವವೇದಿಕೆಯಲ್ಲಿ ಮಿಂಚುತ್ತಿದೆ. 2025ರಲ್ಲಿ ಏಷ್ಯಾದ ಎರಡು ಚಿನ್ನ, ಖೇಲೋ ಇಂಡಿಯಾದ ಬೆಳ್ಳಿಯ ಬೆನ್ನಲ್ಲೇ ಈಗ ವಿಶ್ವ ಕಿರೀಟ.

ಚಿಪ್ಲೂಣಿನ ಮಗಳು ಸಾರಿದ್ದೊಂದೇ: ಕನಸಿಗೆ ಗಡಿಯಿಲ್ಲ. ಊರು ಚಿಕ್ಕದಾದರೇನು, ಛಲ ದೊಡ್ಡದಿರಬೇಕು. ತನ್ವಿ ಗೆದ್ದಿದ್ದು ಪದಕವಲ್ಲ, ಕೋಟಿ ಕನಸುಗಳ ವಿಶ್ವಾಸವನ್ನು.

# ಸಂಬಂಧಗಳ ಸಂತೆಯಲ್ಲಿ, ಸತ್ಯ ಹೇಳುವವನೇ ಏಕಾಂಗಿ

| ಶಿವಬಸಪ್ಪ ಗು. ಜಂಗಾಲಿ

ಮನುಷ್ಯನ ಬದುಕು ಎಂದರೆ ಕೇವಲ ಉಸಿರಾಟದ ಪಯಣವಲ್ಲ; ಅದು ಸಂಬಂಧಗಳ ನೆರಳಲ್ಲಿ ಸಾಗುವ ಒಂದು ದೀರ್ಘ ಯಾತ್ರೆ. ಹುಟ್ಟಿದ ಕ್ಷಣದಿಂದಲೇ ತಾಯಿಯ ಮಮತೆ, ತಂದೆಯ ಕಾಳಜಿ, ಸಹೋದರ-ಸಹೋದರಿಯ ಬಾಂಧವ್ಯ, ಸ್ನೇಹಿತರ ಒಡನಾಟ, ಬಂಧುಗಳ ಆತ್ಮೀಯತೆ, ಸಮಾಜದ ಸಂಪರ್ಕ ಹೀಗೆ ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಯಾವುದೋ ಒಂದು ಸಂಬಂಧ ನಮ್ಮನ್ನು ಸುತ್ತುವರಿದಿರುತ್ತದೆ. ಸಂಬಂಧಗಳಿಲ್ಲದೆ ಬದುಕು ಬಿಕೋ ಎನಿಸಬಹುದು. ಆದರೆ ಅದೇ ಸಂಬಂಧಗಳ ನಡುವೆ ಮನುಷ್ಯ ತನ್ನ ನಿಜವಾದ ಮಾತನ್ನು ಹೇಳಲು ಆರಂಭಿಸಿದಾಗ, ಕೆಲವೊಮ್ಮೆ ಅವನ ಸುತ್ತಲಿನ ಜನರ ಸಂಖ್ಯೆ ಕಡಿಮೆಯಾಗತೊಡಗುತ್ತದೆ. ಸತ್ಯ ಹೇಳುವ ನಾಲಿಗೆಗೆ ಚಪ್ಪಾಳೆಗಿಂತ ಮೌನವೇ ಹೆಚ್ಚು ಸಿಗುತ್ತದೆ. ಇದೇ ಕಾರಣಕ್ಕೆ ?ಸಂಬಂಧಗಳ ಸಂತೆಯಲ್ಲಿ, ಸತ್ಯ ಹೇಳುವವನೇ ಏಕಾಂಗಿ? ಎಂಬ ಮಾತು ಇಂದಿನ ಬದುಕಿನ ಕಹಿ ವಾಸ್ತವವನ್ನು ಪ್ರತಿಬಿಂಬಿಸುತ್ತದೆ.

ಸಂಬಂಧಗಳು ಒಂದು ಸಂತೆಯಂತಿವೆ. ಸಂತೆಯಲ್ಲಿ ಪ್ರತಿಯೊಂದು ವಸ್ತುವಿಗೂ ಬೆಲೆ ಇರುತ್ತದೆ; ಹಾಗೆಯೇ ಬದುಕಿನ ಕೆಲವು ಸಂಬಂಧಗಳಿಗೂ ಕಾಣದ ಬೆಲೆ ಇರುತ್ತದೆ. ಕೆಲವರು ನಮ್ಮೊಂದಿಗೆ ಇರುವುದಕ್ಕೆ ನಮ್ಮ ಮಾತುಗಳಿಗಿಂತ ನಮ್ಮಿಂದ ಅವರಿಗೆ ಸಿಗುವ ಅನುಕೂಲವೇ ಕಾರಣವಾಗಿರಬಹುದು. ನಾವು ಅವರ ಮಾತಿಗೆ ತಲೆದೂಗಿದರೆ ಅವರು ನಮ್ಮವರು; ಅವರ ತಪ್ಪನ್ನು ತೋರಿಸಿದರೆ ನಾವು ಅವರ ವಿರೋಧಿಗಳು. ಅವರ ನಿರೀಕ್ಷೆಯಂತೆ ನಡೆದುಕೊಂಡರೆ ಆತ್ಮೀಯರು; ನಮ್ಮ ಮನಸ್ಸಿನ ಮಾತು ಹೇಳಿದರೆ ಅಹಂಕಾರಿಗಳು. ಈ ವಿಚಿತ್ರ ಮಾನಸಿಕತೆಯ ನಡುವೆ ಸತ್ಯ ಮಾತನಾಡುವ ವ್ಯಕ್ತಿ ನಿಧಾನವಾಗಿ ಒಂಟಿಯಾಗುತ್ತಾನೆ.

ಸತ್ಯ ಯಾವಾಗಲೂ ಸಿಹಿಯಾಗಿರುವುದಿಲ್ಲ. ಕೆಲವು ಸತ್ಯಗಳು ಕಹಿಯಾಗಿರುತ್ತವೆ. ಕಹಿ ಔಷಧಿ ದೇಹಕ್ಕೆ ಒಳ್ಳೆಯದಾದರೂ ನಾಲಿಗೆಗೆ ಇಷ್ಟವಾಗದಂತೆ, ಸತ್ಯವೂ ಬದುಕಿಗೆ ಅಗತ್ಯವಾದರೂ ಕೇಳುವವನ ಮನಸ್ಸಿಗೆ ಇಷ್ಟವಾಗುವುದಿಲ್ಲ. ನಾವು ತಪ್ಪು ಮಾಡಿದ್ದಾಗ ಅದನ್ನು ಒಪ್ಪಿಕೊಳ್ಳಲು ಕಷ್ಟವಾಗುತ್ತದೆ. ನಮ್ಮನ್ನು ಹೊಗಳುವವನು ನಮಗೆ ಹತ್ತಿರವಾಗುತ್ತಾನೆ; ನಮ್ಮ ತಪ್ಪನ್ನು ತೋರಿಸುವವನು ದೂರವಾಗುತ್ತಾನೆ. ಆದರೆ ನಿಜವಾದ ಸಂಬಂಧವೆಂದರೆ ನಮ್ಮ ತಪ್ಪುಗಳಿಗೂ ಕನ್ನಡಿ ಹಿಡಿಯಬಲ್ಲ ಸಂಬಂಧ. ಮುಖದ ಮೇಲೆ ನಗು, ಹಿಂದೆ ಟೀಕೆ ಮಾಡುವವರಿಗಿಂತ, ಮುಖದ ಮೇಲೆಯೇ ಸತ್ಯ ಹೇಳುವವನು ಕೆಲವೊಮ್ಮೆ ಕಠಿಣನಾಗಿ ಕಾಣಬಹುದು; ಆದರೆ ಅವನ ಮನಸ್ಸಿನಲ್ಲಿ ಕಾಳಜಿ ಇರುತ್ತದೆ.

ಇಂದಿನ ಸಮಾಜದಲ್ಲಿ ಸತ್ಯ ಹೇಳುವುದಕ್ಕಿಂತ ಎಲ್ಲರಿಗೂ ಇಷ್ಟವಾಗುವಂತೆ ಮಾತನಾಡುವುದು ಸುಲಭವಾಗಿದೆ. ಯಾರ ಮನಸ್ಸಿಗೂ ನೋವಾಗದಂತೆ ಮಾತನಾಡಬೇಕು ಎಂಬುದು ಒಳ್ಳೆಯ ಗುಣ. ಆದರೆ ಯಾರ ತಪ್ಪಿಗೂ ಪ್ರಶ್ನೆ ಮಾಡಬಾರದು, ಅನ್ಯಾಯ ಕಂಡರೂ ಮೌನವಾಗಬೇಕು, ಸುಳ್ಳನ್ನು ಸತ್ಯವೆಂದು ಒಪ್ಪಿಕೊಳ್ಳಬೇಕು ಎಂಬುದು ಸಂಬಂಧಗಳ ಸಂರಕ್ಷಣೆ ಅಲ್ಲ; ಅದು ಸ್ವಾಭಿಮಾನದ ನಿಧಾನವಾದ ಮರಣ. ಸಂಬಂಧ ಉಳಿಸಿಕೊಳ್ಳುವ ಹೆಸರಿನಲ್ಲಿ ಪ್ರತಿಯೊಂದು ತಪ್ಪಿಗೂ ಮೌನವಾಗುತ್ತಿದ್ದರೆ, ಒಂದು ದಿನ ನಮ್ಮದೇ ಮನಸ್ಸಿನ ಮುಂದೆ ನಾವು ಅಪರಾಧಿಗಳಾಗಬಹುದು.

ಸತ್ಯ ಹೇಳುವ ವ್ಯಕ್ತಿಗೆ ಮೊದಲಿಗೆ ಎದುರಾಗುವುದು ವಿರೋಧ. ?ನಿನಗೆ ಏಕೆ ಬೇಕು??, ?ನಮ್ಮ ವಿಷಯದಲ್ಲಿ ನೀನು ಏಕೆ ಮಾತನಾಡಬೇಕು??, ?ನೀನು ಎಲ್ಲವನ್ನೂ ತಿಳಿದವನಂತೆ ವರ್ತಿಸಬೇಡ? ಎಂಬ ಮಾತುಗಳು ಕೇಳಿಬರಬಹುದು. ನಿನ್ನೆ ತನಕ ಆತ್ಮೀಯನಾಗಿದ್ದವನು ಇಂದು ದೂರವಾಗಬಹುದು. ವರ್ಷಗಳ ಸ್ನೇಹ ಒಂದು ಮಾತಿನಿಂದ ಬಿರುಕು ಬಿಡಬಹುದು. ಕುಟುಂಬದೊಳಗೆ ತಪ್ಪು ತೋರಿಸಿದರೆ ಮನಸ್ತಾಪ ಉಂಟಾಗಬಹುದು. ಕೆಲವೊಮ್ಮೆ ಸತ್ಯ ಹೇಳಿದ ವ್ಯಕ್ತಿಯನ್ನೇ ಸಮಸ್ಯೆಯ ಮೂಲವೆಂದು ತೋರಿಸುವ ಪ್ರಯತ್ನವೂ ನಡೆಯಬಹುದು. ಹೀಗಾಗಿ ಸತ್ಯವಂತನಿಗೆ ಸತ್ಯದ ಬೆಲೆ ಹಲವಾರು ಬಾರಿ ಏಕಾಂತವಾಗುತ್ತದೆ.

ಆದರೆ ಏಕಾಂತ ಎಂದರೆ ಯಾವಾಗಲೂ ಸೋಲಲ್ಲ. ಕೆಲವೊಮ್ಮೆ ಏಕಾಂತವೇ ನಮ್ಮ ಸತ್ಯದ ಬೆಲೆ. ಎಲ್ಲರೂ ನಮ್ಮನ್ನು ಒಪ್ಪಿಕೊಂಡಿದ್ದಾರೆ ಎಂಬ ಕಾರಣಕ್ಕೆ ನಾವು ಸರಿಯಾಗಿದ್ದೇವೆ ಎಂದರ್ಥವಲ್ಲ. ಎಲ್ಲರೂ ನಮ್ಮನ್ನು ವಿರೋಧಿಸುತ್ತಿದ್ದಾರೆ ಎಂಬ ಕಾರಣಕ್ಕೆ ನಾವು ತಪ್ಪಾಗಿದ್ದೇವೆ ಎಂದೂ ಅಲ್ಲ. ಜನರ ಮೆಚ್ಚುಗೆಯಿಗಿಂತ ನಮ್ಮ ಮನಸ್ಸಿನ ಸಾಕ್ಷಿ ಮುಖ್ಯ. ಸಮಾಜದ ಚಪ್ಪಾಳೆ ಕ್ಷಣಿಕ; ಆತ್ಮಸಾಕ್ಷಿಯ ನೆಮ್ಮದಿ ದೀರ್ಘಕಾಲದದ್ದು.

ಸತ್ಯ ಹೇಳುವವನು ಪ್ರತಿಯೊಂದು ಸಂದರ್ಭದಲ್ಲಿ ಕಠಿಣವಾಗಿ ಮಾತನಾಡಬೇಕೆಂದಿಲ್ಲ. ಸತ್ಯ ಮತ್ತು ಕಟುವಾದ ಮಾತು ಒಂದೇ ಅಲ್ಲ. ಸತ್ಯವನ್ನು ಹೇಗೆ ಹೇಳುತ್ತೇವೆ ಎಂಬುದೂ ಮುಖ್ಯ. ಒಂದು ಮಾತು ಸತ್ಯವಾಗಿದ್ದರೂ ಅದನ್ನು ಅವಮಾನಿಸುವ ರೀತಿಯಲ್ಲಿ ಹೇಳಿದರೆ ಅದು ಸಂಬಂಧವನ್ನು ಮುರಿಯಬಹುದು. ಅದೇ ಸತ್ಯವನ್ನು ಕಾಳಜಿಯಿಂದ, ಸೂಕ್ತ ಸಮಯದಲ್ಲಿ, ಗೌರವದಿಂದ ಹೇಳಿದರೆ ಅದು ಸಂಬಂಧವನ್ನು ಉಳಿಸಬಹುದು. ಆದ್ದರಿಂದ ಸತ್ಯಕ್ಕೆ ಜೊತೆಯಾಗಿ ಸಂವೇದನೆಯೂ ಇರಬೇಕು. ಮಾತಿನಲ್ಲಿ ಸತ್ಯವಿರಲಿ; ಆದರೆ ಹೃದಯದಲ್ಲಿ ಕರುಣೆಯಿರಲಿ.




ಕೆಲವರು ಸತ್ಯ ಹೇಳುವುದನ್ನು ತಮ್ಮ ಹಕ್ಕು ಎಂದು ಭಾವಿಸಿ, ಇತರರ ಮನಸ್ಸಿಗೆ ನೋವುಂಟುಮಾಡುವುದನ್ನೇ ಪ್ರಾಮಾಣಿಕತೆ ಎಂದುಕೊಳ್ಳುತ್ತಾರೆ. ಅದು ಪ್ರಾಮಾಣಿಕತೆ ಅಲ್ಲ. ಯಾರನ್ನಾದರೂ ಕೆಳಗಿಳಿಸುವ ಉದ್ದೇಶದಿಂದ ಹೇಳುವ ಮಾತು ಸತ್ಯವಾಗಿದ್ದರೂ ಅದರ ಹಿಂದೆ ಮಾನವೀಯತೆ ಇಲ್ಲದಿದ್ದರೆ ಅದರ ಮೌಲ್ಯ ಕುಗ್ಗುತ್ತದೆ. ಸತ್ಯದ ಉದ್ದೇಶ ವ್ಯಕ್ತಿಯನ್ನು ನಾಶಮಾಡುವುದು ಅಲ್ಲ; ತಪ್ಪನ್ನು ಸರಿಪಡಿಸುವುದು. ಸತ್ಯದ ಜೊತೆಗೆ ಸಹಾನುಭೂತಿ ಸೇರಿದಾಗ ಮಾತ್ರ ಅದು ಔಷಧಿಯಾಗುತ್ತದೆ.

ಸಂಬಂಧಗಳಲ್ಲಿ ಮತ್ತೊಂದು ದೊಡ್ಡ ಸಮಸ್ಯೆ ಎಂದರೆ ನಾವು ಕೇಳಲು ಇಷ್ಟಪಡುವ ಮಾತುಗಳನ್ನು ಮಾತ್ರ ಸತ್ಯವೆಂದು ಸ್ವೀಕರಿಸುವುದು. ನಮ್ಮನ್ನು ಹೊಗಳಿದರೆ ಅವನು ಒಳ್ಳೆಯವನು. ನಮ್ಮ ತಪ್ಪನ್ನು ಹೇಳಿದರೆ ಅವನು ಕೆಟ್ಟವನು. ನಮ್ಮ ನಿರ್ಧಾರವನ್ನು ಬೆಂಬಲಿಸಿದರೆ ಆತ್ಮೀಯ. ಪ್ರಶ್ನಿಸಿದರೆ ಶತ್ರು. ಇಂತಹ ಮನೋಭಾವದಿಂದ ಸಂಬಂಧಗಳು ಗಟ್ಟಿಯಾಗುವುದಿಲ್ಲ; ಅವು ಕೇವಲ ಮುಖವಾಡಗಳಾಗಿ ಉಳಿಯುತ್ತವೆ. ನಿಜವಾದ ಸಂಬಂಧದಲ್ಲಿ ಒಪ್ಪಿಗೆಯಷ್ಟೇ ಅಲ್ಲ, ಭಿನ್ನಾಭಿಪ್ರಾಯಕ್ಕೂ ಜಾಗ ಇರಬೇಕು.

ಕುಟುಂಬದಲ್ಲಿಯೂ ಇದೇ ಸತ್ಯ. ಮಕ್ಕಳ ತಪ್ಪನ್ನು ಪ್ರೀತಿಯ ಹೆಸರಿನಲ್ಲಿ ಮುಚ್ಚಿಡುವುದು ಕಾಳಜಿ ಅಲ್ಲ. ಸ್ನೇಹಿತನ ತಪ್ಪನ್ನು ಸ್ನೇಹದ ಹೆಸರಿನಲ್ಲಿ ಬೆಂಬಲಿಸುವುದು ನಿಷ್ಠೆ ಅಲ್ಲ. ಬಂಧುವಿನ ಅನ್ಯಾಯವನ್ನು ಸಂಬಂಧದ ಹೆಸರಿನಲ್ಲಿ ಸಮರ್ಥಿಸುವುದು ಮಾನವೀಯತೆ ಅಲ್ಲ. ಕೆಲವೊಮ್ಮೆ ನಾವು ಪ್ರೀತಿಸುವ ವ್ಯಕ್ತಿಗೆ ?ನೀನು ತಪ್ಪು ಮಾಡುತ್ತಿದ್ದೀಯ? ಎಂದು ಹೇಳುವ ಧೈರ್ಯವೇ ನಿಜವಾದ ಪ್ರೀತಿ. ಏಕೆಂದರೆ ತಪ್ಪನ್ನು ಬೆಂಬಲಿಸುವವನು ಕ್ಷಣಿಕ ಸಂತೋಷ ಕೊಡಬಹುದು; ತಪ್ಪಿನಿಂದ ಹೊರಗೆಳೆಯುವವನು ಜೀವನಪೂರ್ತಿ ಉಪಕಾರಿಯಾಗಬಹುದು.

ಸತ್ಯ ಹೇಳುವ ವ್ಯಕ್ತಿಯ ಬದುಕಿನಲ್ಲಿ ಒಂದು ವಿಚಿತ್ರ ಹಂತ ಬರುತ್ತದೆ. ಮೊದಲು ಅವನನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ. ನಂತರ ಅವನಿಂದ ದೂರವಾಗುತ್ತಾರೆ. ಕೊನೆಗೆ ಅವನು ಹೇಳಿದ ಮಾತಿನ ಅರ್ಥವನ್ನು ಸಮಯವೇ ತಿಳಿಸುತ್ತದೆ. ಸಮಯ ದೊಡ್ಡ ನ್ಯಾಯಾಧೀಶ. ಇಂದು ಕಹಿಯಾಗಿ ಕಂಡ ಮಾತು ನಾಳೆ ಸತ್ಯವೆಂದು ತಿಳಿಯಬಹುದು. ಇಂದು ವಿರೋಧಿಸಿದ ವ್ಯಕ್ತಿ, ನಾಳೆ ಅದೇ ಮಾತಿಗಾಗಿ ಕೃತಜ್ಞನಾಗಬಹುದು. ಆದ್ದರಿಂದ ಸತ್ಯ ಹೇಳಿದ ತಕ್ಷಣ ಫಲ ಸಿಗಬೇಕು ಎಂದು ನಿರೀಕ್ಷಿಸುವ ಅಗತ್ಯವಿಲ್ಲ.

ಆದರೆ ಸತ್ಯ ಹೇಳುವ ಧೈರ್ಯಕ್ಕೆ ಮತ್ತೊಂದು ಗುಣವೂ ಬೇಕು ತನ್ನ ತಪ್ಪನ್ನು ಒಪ್ಪಿಕೊಳ್ಳುವ ವಿನಯ. ಇತರರ ತಪ್ಪುಗಳನ್ನು ತೋರಿಸುವವನು ತನ್ನ ತಪ್ಪನ್ನೂ ಒಪ್ಪಿಕೊಳ್ಳಬಲ್ಲವನಾಗಿರಬೇಕು. ?ನಾನು ಎಂದಿಗೂ ತಪ್ಪಾಗುವುದಿಲ್ಲ? ಎನ್ನುವ ವ್ಯಕ್ತಿ ಸತ್ಯವಂತನಲ್ಲ; ಅವನು ತನ್ನ ಅಭಿಪ್ರಾಯದ ಬಂಧಿ. ನಿಜವಾದ ಸತ್ಯವಂತನು ತನ್ನ ತಪ್ಪು ಗೊತ್ತಾದಾಗ ಕ್ಷಮೆ ಕೇಳಲು ಹೆದರುವುದಿಲ್ಲ. ತನ್ನ ಮಾತು ತಪ್ಪೆಂದು ಅರಿತಾಗ ಅದನ್ನು ಬದಲಾಯಿಸಲು ಹಿಂಜರಿಯುವುದಿಲ್ಲ.

ಇಂದಿನ ಸಾಮಾಜಿಕ ಮಾಧ್ಯಮದ ಯುಗದಲ್ಲಿ ಈ ವಿಚಾರ ಇನ್ನಷ್ಟು ಪ್ರಸ್ತುತವಾಗಿದೆ. ಎಲ್ಲರೂ ತಮ್ಮ ಬದುಕಿನ ಸುಂದರ ಭಾಗವನ್ನು ಮಾತ್ರ ತೋರಿಸಲು ಬಯಸುತ್ತಾರೆ. ನಗುವಿನ ಚಿತ್ರಗಳ ಹಿಂದೆ ನೋವು ಇರಬಹುದು. ಹೊಗಳಿಕೆಯ ಮಾತುಗಳ ಹಿಂದೆ ಅಸಮಾಧಾನ ಇರಬಹುದು. ಆತ್ಮೀಯತೆಯ ಪ್ರದರ್ಶನದ ಹಿಂದೆ ಸ್ವಾರ್ಥ ಇರಬಹುದು. ಹೀಗಾಗಿ ಕಾಣುವುದೆಲ್ಲ ಸತ್ಯವಲ್ಲ; ಕೇಳುವುದೆಲ್ಲ ನಿಜವಲ್ಲ. ಮನುಷ್ಯನನ್ನು ಅವನ ಮಾತಿಗಿಂತ ಅವನ ನಡೆ ಗುರುತಿಸುತ್ತದೆ.ಸಂಬಂಧಗಳ ಸಂತೆ ದೊಡ್ಡದಾಗುತ್ತಿದ್ದಂತೆ ನಿಜವಾದ ಸಂಬಂಧಗಳ ಸಂಖ್ಯೆ ಕಡಿಮೆಯಾಗಬಾರದು. ನಮ್ಮ ಸುತ್ತಲೂ ನೂರಾರು ಜನರಿದ್ದರೂ, ನಮ್ಮ ತಪ್ಪನ್ನು ಮುಖದ ಮೇಲೆ ಹೇಳಬಲ್ಲ ಒಬ್ಬ ವ್ಯಕ್ತಿಯಿದ್ದರೆ ಸಾಕು. ನಮ್ಮ ಯಶಸ್ಸಿಗೆ ಚಪ್ಪಾಳೆ ತಟ್ಟುವವರು ಹಲವರು ಸಿಗಬಹುದು; ನಮ್ಮ ವೈಫಲ್ಯದಲ್ಲಿ ನಮ್ಮ ಕೈ ಹಿಡಿಯುವವರು ಕೆಲವರೇ. ನಮ್ಮ ಮಾತಿಗೆ ತಲೆದೂಗುವವರು ಅನೇಕರು; ನಮ್ಮ ತಪ್ಪಿಗೆ ಕನ್ನಡಿ ಹಿಡಿಯುವವರು ಅಪರೂಪ. ಅಂತಹವರನ್ನು ಕಳೆದುಕೊಳ್ಳಬಾರದು.

ಸತ್ಯ ಹೇಳುವುದರಿಂದ ಸಂಬಂಧ ಕಳೆದುಹೋಗುವುದಾದರೆ, ಆ ಸಂಬಂಧದ ಬೇರುಗಳು ಎಷ್ಟು ಗಟ್ಟಿಯಾಗಿದ್ದವು ಎಂಬುದನ್ನೂ ಯೋಚಿಸಬೇಕು. ಸತ್ಯವನ್ನು ಸಹಿಸದ ಸಂಬಂಧ ಕೇವಲ ಒಪ್ಪಿಗೆಯ ಮೇಲೆ ನಿಂತಿರಬಹುದು. ನಿಜವಾದ ಸಂಬಂಧಕ್ಕೆ ಸತ್ಯದ ಮಾತುಗಳಿಂದ ಬಿರುಕು ಬರುವುದಿಲ್ಲ; ಬದಲಾಗಿ ಅದು ಇನ್ನಷ್ಟು ಗಟ್ಟಿಯಾಗುತ್ತದೆ. ಏಕೆಂದರೆ ಅಲ್ಲಿ ಅಹಂಕಾರಕ್ಕಿಂತ ಆತ್ಮೀಯತೆ ದೊಡ್ಡದು, ಗೆಲ್ಲುವುದಕ್ಕಿಂತ ಅರ್ಥಮಾಡಿಕೊಳ್ಳುವುದು ಮುಖ್ಯ.

ಜೀವನದಲ್ಲಿ ಎಲ್ಲರನ್ನೂ ಸಂತೋಷಪಡಿಸಲು ಸಾಧ್ಯವಿಲ್ಲ. ಎಲ್ಲರ ಮೆಚ್ಚುಗೆ ಪಡೆಯಲು ಪ್ರಯತ್ನಿಸಿದರೆ, ಕೊನೆಗೆ ನಮ್ಮದೇ ಸ್ವಭಾವವನ್ನು ಕಳೆದುಕೊಳ್ಳುವ ಅಪಾಯವಿದೆ. ಆದ್ದರಿಂದ ಎಲ್ಲರಿಗೂ ಇಷ್ಟವಾಗುವ ವ್ಯಕ್ತಿಯಾಗುವುದಕ್ಕಿಂತ, ನಮ್ಮ ಮನಸ್ಸಿಗೆ ನಿಷ್ಠರಾಗಿರುವ ವ್ಯಕ್ತಿಯಾಗುವುದು ಮುಖ್ಯ. ಆದರೆ ಆ ನಿಷ್ಠೆ ಅಹಂಕಾರವಾಗಬಾರದು. ಸತ್ಯದ ಹೆಸರಿನಲ್ಲಿ ಇತರರನ್ನು ನೋಯಿಸುವ ಹಕ್ಕು ಯಾರಿಗೂ ಇಲ್ಲ. ಸತ್ಯ ಹೇಳಿ, ಆದರೆ ಪ್ರೀತಿಯಿಂದ ಹೇಳಿ. ತಪ್ಪನ್ನು ತೋರಿಸಿ, ಆದರೆ ಅವಮಾನಿಸದೆ ಹೇಳಿ. ವಿರೋಧಿಸಿ, ಆದರೆ ದ್ವೇಷವಿಲ್ಲದೆ ವಿರೋಧಿಸಿ.

ಕೆಲವೊಮ್ಮೆ ಬದುಕಿನಲ್ಲಿ ಏಕಾಂತ ಎದುರಾದಾಗ ನಾವು ?ನನ್ನ ಜೊತೆ ಯಾರೂ ಇಲ್ಲ? ಎಂದು ಬೇಸರಪಡುತ್ತೇವೆ. ಆದರೆ ಆ ಕ್ಷಣದಲ್ಲೇ ಒಂದು ಪ್ರಶ್ನೆ ಕೇಳಿಕೊಳ್ಳಬೇಕು ನನ್ನ ಜೊತೆ ಯಾರೂ ಇಲ್ಲವೇ, ಅಥವಾ ನನ್ನ ಸುತ್ತಲಿರುವವರು ನನ್ನ ನಿಜವಾದ ಸ್ವರೂಪವನ್ನು ಒಪ್ಪಿಕೊಳ್ಳದವರೇ? ಈ ವ್ಯತ್ಯಾಸ ಅರಿತಾಗ ಏಕಾಂತದ ಅರ್ಥವೇ ಬದಲಾಗುತ್ತದೆ. ಜನರ ಗುಂಪಿನಲ್ಲಿ ಒಂಟಿಯಾಗಿರುವುದಕ್ಕಿಂತ, ಸ್ವಾಭಿಮಾನದಿಂದ ಒಬ್ಬನೇ ನಿಂತಿರುವುದು ಉತ್ತಮ.

ಸಂಬಂಧಗಳನ್ನು ಉಳಿಸಿಕೊಳ್ಳಬೇಕು; ಆದರೆ ಸತ್ಯವನ್ನು ಕಳೆದುಕೊಂಡು ಅಲ್ಲ. ಪ್ರೀತಿಯನ್ನು ಕಾಪಾಡಬೇಕು; ಆದರೆ ಸ್ವಾಭಿಮಾನವನ್ನು ಬಲಿಕೊಟ್ಟು ಅಲ್ಲ. ಸ್ನೇಹವನ್ನು ಉಳಿಸಬೇಕು; ಆದರೆ ತಪ್ಪಿಗೆ ಬೆಂಬಲ ನೀಡಿ ಅಲ್ಲ. ಬಂಧುತ್ವವನ್ನು ಗೌರವಿಸಬೇಕು; ಆದರೆ ಅನ್ಯಾಯವನ್ನು ಸಮರ್ಥಿಸಿ ಅಲ್ಲ. ಸಂಬಂಧಗಳ ಸೌಂದರ್ಯ ಸತ್ಯ ಮತ್ತು ವಿಶ್ವಾಸದ ಮೇಲೆ ನಿಂತಾಗ ಮಾತ್ರ ಅದು ಶಾಶ್ವತವಾಗುತ್ತದೆ.

ಅಂತಿಮವಾಗಿ, ಸತ್ಯ ಹೇಳುವವನು ಏಕಾಂಗಿಯಾಗಬಹುದು; ಆದರೆ ಅವನು ಖಾಲಿಯಾಗಿರುವುದಿಲ್ಲ. ಅವನ ಜೊತೆ ಅವನ ಆತ್ಮಸಾಕ್ಷಿ ಇರುತ್ತದೆ. ಅವನ ಜೊತೆ ಅವನ ನಂಬಿಕೆ ಇರುತ್ತದೆ. ಅವನ ಜೊತೆ ಅವನ ಸ್ವಾಭಿಮಾನ ಇರುತ್ತದೆ. ಕೆಲವರು ದೂರವಾದರೂ, ಅವನು ತನ್ನನ್ನೇ ಕಳೆದುಕೊಳ್ಳುವುದಿಲ್ಲ. ಕಾಲ ಕಳೆದಂತೆ ನಿಜವಾದ ಸಂಬಂಧಗಳು ಉಳಿಯುತ್ತವೆ; ಕೇವಲ ಸ್ವಾರ್ಥದ ಸಂಬಂಧಗಳು ಕರಗಿಹೋಗುತ್ತವೆ.

ಸಂಬಂಧಗಳ ಸಂತೆ ಎಷ್ಟೇ ದೊಡ್ಡದಾಗಿರಲಿ, ಅಲ್ಲಿ ಸತ್ಯಕ್ಕೆ ಬೆಲೆ ಕಡಿಮೆಯಾಗಬಾರದು. ನಮ್ಮನ್ನು ಹೊಗಳುವವರಿಗಿಂತ ನಮ್ಮ ತಪ್ಪನ್ನು ಹೇಳುವವರನ್ನು ಗೌರವಿಸೋಣ. ನಮ್ಮ ಮಾತಿಗೆ ಒಪ್ಪುವವರಿಗಿಂತ ನಮ್ಮನ್ನು ಸರಿಪಡಿಸುವವರನ್ನು ಉಳಿಸಿಕೊಳ್ಳೋಣ. ಏಕೆಂದರೆ ಸತ್ಯ ಹೇಳುವವನು ಕೆಲವೊಮ್ಮೆ ಏಕಾಂಗಿಯಾಗಬಹುದು; ಆದರೆ ಸುಳ್ಳಿನ ಗುಂಪಿನಲ್ಲಿ ಬದುಕುವುದಕ್ಕಿಂತ ಸತ್ಯದ ದಾರಿಯಲ್ಲಿ ಒಂಟಿಯಾಗಿ ನಡೆಯುವುದು ಸಾವಿರ ಪಟ್ಟು ಶ್ರೇಷ್ಠ.

ಸಂಬಂಧಗಳು ಉಳಿಯಬೇಕಾದರೆ ಸತ್ಯ ಇರಬೇಕು; ಸತ್ಯ ಉಳಿಯಬೇಕಾದರೆ ಧೈರ್ಯ ಇರಬೇಕು. ಆ ಧೈರ್ಯದಿಂದ ಬದುಕುವವನು ಕೆಲಕಾಲ ಏಕಾಂಗಿಯಾಗಬಹುದು, ಆದರೆ ಎಂದಿಗೂ ತನ್ನೊಳಗೆ ಅನಾಥನಾಗುವುದಿಲ್ಲ.

# ಅಂತರಿಕ್ಷದಲ್ಲಿ ಮ್ಯಾರಥಾನ್ ಪೂರ್ಯೆಸಿದ್ದ ಸುನಿತಾ ವಿಲಿಯಮ್ಸ್



| ವೀಣಾ ಹೇಮಂತ್‌ಗೌಡ ಪಾಟೀಲ್

ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ಮೆಸಾಚುಸೈಟ್ಸ್ ನಗರದಲ್ಲಿ ನಡೆಯುವ ಬೋಸ್ಟನ್ ಮ್ಯಾರಥಾನ್ ಅತ್ಯಂತ ಪ್ರಸಿದ್ಧವಾದ ಮ್ಯಾರಥಾನ್ಗಳಲ್ಲಿ ಒಂದು. 2007ರಲ್ಲಿ ಬೋಸ್ಟನ್ ಮ್ಯಾರಥಾನ್ ನ ಸಂಘಟಕರು ತಮ್ಮ ಮ್ಯಾರಥಾನ್ ಓಟಗಾರರಲ್ಲಿ ಆಕೆಯನ್ನು ಕೂಡ ಓರ್ವ ಸ್ಪರ್ಧಿ ಎಂದು ಪರಿಗಣಿಸಿದ್ದರು. ಆಕೆ ನೇರವಾಗಿ ಸ್ಪರ್ಧೆಯಲ್ಲಿ ಭಾಗವಹಿಸಿರಲಿಲ್ಲ. ಸ್ಪರ್ಧೆ ನಡೆಯುತ್ತಿರುವ ಆ ಜಾಗದಿಂದ ಮಾತ್ರವಲ್ಲ ಭೂಮಿಯಿಂದಲೇ ಸಾವಿರಾರು ಕಿಲೋಮೀಟರ್ ದೂರ ಅಂತರಿಕ್ಷದಲ್ಲಿ ಆಕೆ ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.... ಆಕೆಯೇ ನಮ್ಮ ಭಾರತೀಯರ ಹೆಮ್ಮೆಯ ಮನೆ ಮಗಳು ಸುನೀತಾ ವಿಲಿಯಮ್ಸ್.

ಅದು 2007ರ ಏಪ್ರಿಲ್ 16, ಆ ದಿನ ಅಮೆರಿಕದ ಪ್ರತಿಷ್ಠಿತ ಬಾಹ್ಯಾಕಾಶ ಸಂಸ್ಥೆ ನಾಸಾ ರ ಗಗನಯಾನಿ ಸುನಿತಾ ವಿಲಿಯಮ್ಸ್ ಬೋಸ್ಟನ್ ಮ್ಯಾರಥಾನ್ ನಲ್ಲಿ

ಅಂತರಿಕ್ಷದಿಂದಲೇ ಭಾಗವಹಿಸಿ ಅಂತಿಮ ಗುರಿಯನ್ನು ತಲುಪಿದ ವ್ಯಕ್ತಿಯಾಗಿದ್ದರು.

.ಅಂತರಿಕ್ಷದಲ್ಲಿರುವ ಬಾಹ್ಯಾಕಾಶ ಉಪಗ್ರಹಗಳ ಸ್ಪೇಸ್ ಸ್ಟೇಷನ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಕೆ ಬೋಸ್ಟನ್ ನಗರದ ರಸ್ತೆಗಳಲ್ಲಿ ಈ ಮ್ಯಾರಥಾನನ್ನು ಪೂರ್ಣಗೊಳಿಸಲಿಲ್ಲ, ಬದಲಾಗಿ ಅಂತರಿಕ್ಷದಲ್ಲಿ ಇರುವ ಎಲೆಕ್ಟ್ರಾನಿಕ್ ಟ್ರೆಡ್ ಮಿಲ್ ಮೇಲೆ ತಮ್ಮ ಓಟವನ್ನು ಪೂರೈಸಿದರು.

ಅತ್ಯಂತ ಕಡಿಮೆ ಗುರುತ್ವಾಕರ್ಷಣೆ ಅಥವಾ ಶೂನ್ಯ ಗುರುತ್ವಾಕರ್ಷಣೆಯನ್ನು ಹೊಂದಿರುವ ಅಂತರಿಕ್ಷ ಬಾಹ್ಯಾಕಾಶ ಸಂಸ್ಥೆಯಲ್ಲಿ ಮ್ಯಾರಥಾನಗೆ ಅವಶ್ಯಕವಿರುವ ಸಂಪೂರ್ಣ ದಾರಿಯನ್ನು ಕ್ರಮಿಸಲು ವಿಶೇಷ ಸಲಕರಣೆಗಳ ಅಗತ್ಯ ಆಕೆಗೆ ಇತ್ತು.

ಸುನಿತಾ ವಿಲಿಯಮ್ಸ್ ಕೇವಲ ಟ್ರೆಡ್ ಮಿಲ್ ನ ಮೇಲೆ ಓಡಲಿಲ್ಲ, ಬದಲಾಗಿ ಟ್ರೆಡ್ ಮಿಲ್ ಗೆ ಜೋಡಿಸಿದ ಬಿಗಿಯಾದ ಎಲಾಸ್ಟಿಕ್ ಎಳೆಗಳ ಪಟ್ಟಿಗಳನ್ನು ಆಕೆಯ ಉಡುಪುಗಳಿಗೆ ಜೋಡಿಸಲಾಗಿತ್ತು. ಇಲ್ಲದೆ ಹೋದರೆ ಆಕೆ ಟ್ರೆಡ್ ಮಿಲ್ ನ ಮೇಲೆ ನಡೆಯಲು ಸಾಧ್ಯವೇ ಆಗುತ್ತಿರಲಿಲ್ಲ. ಮ್ಯಾರಥಾನ್ ನ ಒಟ್ಟು 26.2 ಮೈಲು ಅಂದರೆ ಒಟ್ಟು 42.2 ಕಿಲೋಮೀಟರ್ ದೂರವನ್ನು ಆಕೆ ನಾಲ್ಕು ಗಂಟೆ 23 ನಿಮಿಷ 46 ಸೆಕೆಂಡ್ ಗಳಲ್ಲಿ ಓಡಿ ಪೂರೈಸಿದರು. ಆ ಸಮಯದಲ್ಲಿ ಅಂತರಿಕ್ಷ ಗಗನಯಾನ ಸಂಸ್ಥೆಯು ಭೂಮಿಯ ಸುತ್ತ ಗಂಟೆಗೆ 28000 ಕಿ.ಮೀ ವೇಗದಲ್ಲಿ ಸುತ್ತುತ್ತಿತ್ತು ಇದರ ಅರ್ಥ ಇಷ್ಟೇ. ಸುನಿತಾ ವಿಲಿಯಮ್ಸ್ ಕೇವಲ ಮ್ಯಾರಥಾನ್ ಓಟವನ್ನು ಮಾತ್ರ ಪೂರ್ಣಗೊಳಿಸಲಿಲ್ಲ ಬದಲಾಗಿ ಆಕೆ ಇಡೀ ಭೂಮಿಯನ್ನು ಕೂಡ ಸುತ್ತುತ್ತಿದ್ದಳು. ಆ ಸಮಯದಲ್ಲಿ ಆಕೆ ತನ್ನ ದೇಹದ ಮೇಲೆ ಬೋಸ್ಟನ್ ಮ್ಯಾರಥಾನ್ ನ ಅಧಿಕೃತ ಪಟ್ಟಿಯನ್ನು ಹಾಗೂ ವಿಶೇಷವಾಗಿ ಬೋಸ್ಟನ್ ನ ರಥಾನಲ್ಲಿ ಬಳಸುವ ಕೆಂಪು ಸಾಕ್ಸ್ ಗಳನ್ನು ಧರಿಸಿ ಓಡಿದ್ದಳು

ಭೂಮಿಯಲ್ಲಿ ಬೊಸ್ಟನ್ ಮ್ಯಾರಥಾನ ನಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳನ್ನು ಲೈವ್ ಆಗಿ ನೋಡುತ್ತಾ ಆಯೋಜಕರು ಹೇಳುವ ರೀತಿಯಲ್ಲಿಯೇ ಆಕೆ ರೇಸ ನಲ್ಲಿ ಪಾಲ್ಗೊಂಡಳು.

ವಿಶೇಷವೆಂದರೆ ಆಕೆ ಬೋಸ್ಟನ್ ಮ್ಯಾರಥಾನ್ ನಲ್ಲಿ ತನ್ನ ಓಟವನ್ನು ಮುಗಿಸುವ ಹೊತ್ತಿಗೆ ಆಕೆ ವಾಸಿಸುತ್ತಿದ್ದ ಅಂತರಿಕ್ಷ ಗ್ರಹವು ಭೂಮಿಯನ್ನು ಮೂರು ಸುತ್ತು ಸುತ್ತಿ ಮುಗಿಸಿತ್ತು.

ಭೂಮಿಯಿಂದ ಸಾವಿರಾರು ಮೈಲಿ ದೂರದಲ್ಲಿರುವ ಅಂತರಿಕ್ಷದಲ್ಲಿ ಬೋಸ್ಟನ್ ಮ್ಯಾರಥಾನ್ ನಲ್ಲಿ ಪಾಲ್ಗೊಂಡ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಸುನಿತಾ ವಿಲಿಯಮ್ಸ್ ರವರ ಮುಡಿಗೇರಿತು. ಅದು ಅಲ್ಲದೆ ಅಂತರಿಕ್ಷ ಗಗನಯಾನ ಸಂಸ್ಥೆ ಬೂಸ್ಟರ್ ಮ್ಯಾರಥಾನ್ ಸಂಸ್ಥೆ ಹಾಗೂ ಓಡುತ್ತಿರುವ ಎಲ್ಲ ಸ್ಪರ್ಧಿಗಳ ನಡುವೆ ಒಂದು ವಿಶೇಷವಾದ ಅನುಬಂಧವನ್ನು ಈ ಮ್ಯಾರಥಾನ್ ಉಂಟು ಮಾಡಿತು ಎಂದರೆ ತಪ್ಪಿಲ್ಲ. ಈ ಮ್ಯಾರಥಾನಗೆ ಪೂರ್ವ ತಯಾರಿ ಅತ್ಯಂತ ಅಗತ್ಯ ಅದರಲ್ಲೂ ಶೂನ್ಯ ಗುರುತ್ವಾಕರ್ಷಣೆಯಲ್ಲಿ ಅತ್ಯಂತ ದೀರ್ಘ ಕಾಲ ಕಾರ್ಯನಿರ್ವಹಿಸುವ ಅಂತರಿಕ್ಷಯಾನಿಗಳಿಗೆ ತಮ್ಮ ದೇಹದ ಮೂಳೆಗಳು ಹಾಗೂ ಎಲುವುಗಳ ಕಾರ್ಯಕ್ಷಮತೆಯನ್ನು ಕಾಯ್ದುಕೊಳ್ಳಲು ದೈನಂದಿನ ವ್ಯಾಯಾಮ ಅತ್ಯಗತ್ಯ ಅಂತೆಯೇ ಎಲ್ಲ ಗಗನಯಾನಿಗಳು ಕಡ್ಡಾಯವಾಗಿ ಟ್ರೆಡ್ ಮಿಲ್ ಮತ್ತು ಇತರ ವ್ಯಾಯಾಮದ ಸಲಕರಣೆಗಳ ಮೊರೆ ಹೋಗುತ್ತಾರೆ. ತನ್ನ ದೈನಂದಿನ ದಿನಚರಿಯ ಭಾಗವಾಗಿ ಹೋಗಿದ್ದ ಓಟವನ್ನು ಮ್ಯಾರಥಾನ್ ಓಟವನ್ನು ಪೂರೈಸಲು ಬಳಸಿಕೊಂಡಿದ್ದು ಅಭಿನಂದನಾರ್ಹ.

ಅಲ್ವೇ ಸ್ನೇಹಿತರೆ ?

# ಕೆಲವು ಸಾಹಿತ್ಯ-ಸಾಂಸ್ಕೃತಿಕ ಗುಂಪುಗಳು ಒತ್ತಡ ಹೇರುವುದು ಸರಿಯೇ?

| ಪುಷ್ಪ ಪ್ರಸಾದ್

ಸಾಹಿತ್ಯ ಗುಂಪು ಎಂದರೆ ಬರಹಗಾರರು, ಕವಿಗಳು ಮತ್ತು ಚಿಂತಕರು ಒಂದಾಗಿ ಸೇರಿ ಸಾಹಿತ್ಯದ ಬಗ್ಗೆ ಚರ್ಚೆ ಮಾಡುವ, ಹೊಸ ಕೃತಿಗಳನ್ನು ರಚಿಸುವ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಶ್ರಮಿಸುವ ಸಂಘಟನೆ ಅಥವಾ ಕೂಟ ಎಂದು ಕರೆಯುತ್ತಾರೆ. ಈ ಗುಂಪುಗಳು ಹುಟ್ಟುವುದೇಕೆ? ಕೆಲವರ ಪ್ರಕಾರ ಗುಂಪಿನ ಸೃಷ್ಟಿ ಆಕಸ್ಮಿಕ. ಒಮ್ಮೆ ಅದು ಹುಟ್ಟಿತೋ ಅದರಿಂದ ನಮ್ಮ ಅಸ್ಥಿತ್ವಕ್ಕೆ ಲಾಭವಿದೆಯೆಂದು ಗೋಚರಿಸಿ ಸಮೂಹವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಇನ್ನು ಕೆಲವರ ಪ್ರಕಾರ ಸಮೂಹ ಜೀವನ ಮಾನವನ ಅನುಭವದಿಂದ ಬಂದದ್ದು. ನಮ್ಮ ಬರವಣಿಗೆಯ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಗುಂಪುಗಳು ಬೇಕು. ಗುಂಪುಗೂಡುವಿಕೆ ಮೂಲ ಪ್ರವೃತ್ತಿಯಿಂದ ಬಂದಿರಲಿ ಅಥವಾ ಸಮಾಜ ಜನ್ಯವಿರಲಿ, ಅದು ಅನಿವಾರ್ಯ. ನಮ್ಮ ವಿಘ್ನಗಳಿಗೆ ಸಂಕಟಗಳಿಗೆ ಗುಂಪಿನಿಂದಲೇ ಪರಿಹಾರ ಸಾಧ್ಯ. ನಮ್ಮ ಮೌಲ್ಯಗಳೂ ಒಳಿತು ಕೆಡಕುಗಳೂ ವ್ಯಕ್ತಿತ್ವದ ಹಾಸು ಹೊಕ್ಕುಗಳೂ ಗುಂಪಿನಿಂದಲೇ ಬರುತ್ತವೆ. ವ್ಯಕ್ತಿಗಳ ನಿಯಂತ್ರಣವೂ ಗುಂಪಿನ ಕೆಲಸ. ವಿವಿಧ ರೀತಿಯ ಗುಂಪುಗಳು ವ್ಯಕ್ತಿ ಮತ್ತು ವಿಸ್ತೃತ ಸಮಾಜದ ನಡುವೆ ಇರುವ ಕೊಂಡಿಗಳಂತಿವೆ. ಭಾವನಾತ್ಮಕ ಸ್ಥಿರತೆಯೂ ಗುಂಪುಗಳ ಕಾಣಿಕೆ. ಗುಂಪುಗಳಿಂದಲೇ ನಮ್ಮ ಅನೇಕ ಮಾನಸಿಕ ತೊಡಕುಗಳಿಗೂ ರೋಗಗಳಿಗೂ ಚಿಕಿತ್ಸೆ ಕೂಡ ಹೌದು ಎಂದರೆ ತಪ್ಪಾಗಲಾರದು.




?ಆದರೆ ಸಾಹಿತ್ಯ ಗುಂಪುಗಳಲ್ಲಿ ಸದಾ "ಬರೆಯಿರಿ, ಬರೆಯಿರಿ" ಎಂದು ಹಠ ಮಾಡುವುದು ಅಥವಾ ಒತ್ತಡ ಹೇರುವುದು ಸರಿಯಲ್ಲ. ಇದು ಸೃಜನಶೀಲತೆಗೆ ಧಕ್ಕೆ ತರುತ್ತದೆ, ಬರಹಗಾರರಲ್ಲಿ ಮಾನಸಿಕ ಒತ್ತಡ ಉಂಟುಮಾಡುತ್ತದೆ ಮತ್ತು ಗುಣಮಟ್ಟಕ್ಕಿಂತ ಸಂಖ್ಯೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದಂತಾಗುತ್ತದೆ. ಸಾಹಿತ್ಯವು ಒತ್ತಾಯದಿಂದ ಮೂಡಿಬರುವುದಿಲ್ಲ, ಅದು ಆಂತರಿಕ ಪ್ರೇರಣೆಯಿಂದ ಬರಬೇಕು.ಬಲವಂತದ ಬರವಣಿಗೆಯಿಂದ ಗುಣಮಟ್ಟದ ಕೃತಿಗಳು ಮೂಡಿಬರಲು ಸಾಧ್ಯವಿಲ್ಲ. ಲೇಖಕರಿಗೆ ತಮ್ಮದೇ ಆದ ಸಮಯ ಮತ್ತು ರಭಸವಿರುತ್ತದೆ. ಹಠ ಮಾಡುವುದು ಅವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ವಿಚಾರರಹಿತ, ನಕಲಿ ಅಥವಾ ಕಳಪೆ ಬರಹಗಳ ಪ್ರವಾಹ ಹೆಚ್ಚಾಗಲು ಇದು ಕಾರಣವಾಗುತ್ತದೆ. ಸತತ ಒತ್ತಡದಿಂದ ಬೇಸತ್ತು ಕೆಲವರು ಸಾಹಿತ್ಯಿಕ ಚಟುವಟಿಕೆಗಳಿಂದಲೇ ದೂರ ಉಳಿಯಬಹುದು. ಬಲವಂತ ಮಾಡುವುದಕ್ಕಿಂತ ಉತ್ತಮ ಕನ್ನಡ ಸಾಹಿತ್ಯ ಕೃತಿಗಳನ್ನು ಪರಿಚಯಿಸುವ ಮೂಲಕ ಹುರುಪು ತುಂಬಬೇಕು. ಬರೆಯಲು ಆಸಕ್ತಿ ಇರುವವರಿಗೆ ಮುಕ್ತ ವೇದಿಕೆ ಮತ್ತು ಸಕಾರಾತ್ಮಕ ವಿಮರ್ಶೆ ಒದಗಿಸಬೇಕು. ಬರಹಗಾರರ ಮೌನ ಅಥವಾ ವಿರಾಮವನ್ನು ಗೌರವಿಸಬೇಕು, ಅಲ್ಲಿ ಶಾಂತತೆ ಕಾಪಾಡಬೇಕು. ಇತ್ತೀಚೆಗೆ ಕೆಲವು ವಾಟ್ಸಾಪ್ ಗುಂಪುಗಳಲ್ಲಿ ನಮ್ಮ ಬಳಗದಲ್ಲಿ ಸಕ್ರೀಯವಾಗಿ ಬರೆಯುತಿದ್ದರೆ ಮಾತ್ರ ನಿಮ್ಮನ್ನು ಇಲ್ಲಿ ಉಳಿಸಿಕೊಳ್ಳುವುದು ಇಲ್ಲದಿದ್ದರೆ ನಿಮ್ಮನ್ನು ಗುಂಪಿನಿಂದ ತೆಗೆದು ಹಾಕಲಾಗುವುದು ಎಂಬ ಸಂದೇಶಗಳು ರವಾನೆಯಗುತ್ತಿರುತ್ತವೆ. ಗುಂಪುಗಳಲ್ಲಿ ಹೊಸ ಹೊಸ ಬರಹಗಾರರನ್ನು, ಅವರ ಕಲೆ, ಸಂಸ್ಕೃತಿಯನ್ನು ಪ್ರೋತ್ಸಾಹಿಸಬೇಕು ನಿಜ ಆದರೆ ಕಡ್ಡಾಯವಾಗಿ ಬರೆಯಲೇ ಬೇಕು, ಅಥವಾ ದಿನೆ ದಿನೇ ಸ್ಪರ್ಧೆ ಆಯೋಜನೆ ಮಾಡಿ ಕಡ್ಡಾಯವಾಗಿ ಭಾಗವಹಿಸಲೇ ಬೇಕು ಎಂದು ಹಠ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಎಲ್ಲರಿಗೂ ಎಲ್ಲಾ ಸಮಯದಲ್ಲೂ ವಾಟ್ಸಪ್ ಗುಂಪುಗಳಲ್ಲೇ ಕಾಲ ಕಳೆಯಲು ಸಮಯವಿರುತ್ತದೆಯೇ? ಅವರವರಿಗೆ ಆದಂತಹ ಕೆಲಸ ಕಾರ್ಯಗಳು, ಒತ್ತಡಗಳು ಇರುವುದಿಲ್ಲವೆ? ಬಿಡುವಿದ್ದಾಗ ಖಂಡಿತವಾಗಿಯೂ ಭಾಗವಹಿಸುವುದಿಲ್ಲವೆ? ಅದನ್ನು ಗುಂಪುಗಳಲ್ಲಿನ ನಿರ್ವಾಹಕರು ಅರ್ಥಮಾಡಿಕೊಳ್ಳದೇ ಇರುವುದು ಎಷ್ಟು ಶೋಚನೀಯ ಅಲ್ವಾ? ಮುಂದಾದರೂ ಈ ಸಾಹಿತ್ಯ, ಸಾಂಸ್ಕೃತಿಕ ಗುಂಪುಗಳು ಅರ್ಥಮಾಡಿಕೊಂಡರೆ ಸಾಹಿತ್ಯಕ್ಕೊಂದು ಬೆಲೆ ಸಿಗಬಹುದು ಅಲ್ಲವೆ? ನೀವೇನಂತೀರಿ?

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,